# ಬೃಂದಾವನ ವಾಣಿ

ಸಂಚಿಕೆ ೨೨, ಜೂನ್ ೨೦೧೯



## ಈ ಸಂಚಿಕೆಯೊಳಗೆ...


೦೪ ಸಂಪಾದಕೀಯ

೦೬ ಅಧ್ಯಕ್ಷರ ನುಡಿ

೦೮ ಯೋಗ ಎಂದರೇನು







೧೨ ವಿಜಯೋತ್ಸವ

**೧೪** ಅಮೇರಿಕದ ಭಾರತೀಯ ಸಮಾಜಕ್ಕೆ ಶ್ರೀಕೃಷ್ಣ ವೃಂದಾವನದ ಕೊಡುಗೆ

೧೬ ಕಥೆ : ವಾಂಛೆಗಳು

೧೧ ಭಾವಪೂರ್ಣ ಶ್ರದ್ಧಾಂಜಲಿ









೧೯ ಅಮ್ಮಂದಿರ ದಿನ

## ಈ ಸಂಚಿಕೆಯೊಳಗೆ...


೨೦ ಸಾಹಿತ್ಯರಂಗದಲ್ಲಿ ಮಿಂಚಿದ ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ಮಕ್ಕಳು

೨೧ ಸಂತ ಶಿಶುನಾಳ ಶರೀಫರ ರೂಪಕ

೨೨ ಆರೋಗ್ಯ ಬೃಂದಾವನ







೨೪ ಪ್ರಬಂಧ—ಶ್ರೀ ಕುವೆಂಪು ಅವರ ಪಾತ್ರಗಳ ವೈಶಿಷ್ಟ್ಯ

೨೯ ಕವನ – ಆಫೀಸಿನಲ್ಲಿ ಕಿರಿಕ್

ಕವನ – ವಸಂತದ ನೆನಪುಗಳು

೩೦ ಕವನ – ಬೃಂದಾವನ





೨೩ ಕವನ: ಅಮ್ಮ

ಬೃಂದಾವನ ಕನ್ನಡ ಬಾಂಧವರೇ,

ಬೇಸಿಗೆ ಕಾಲ ದಾಪುಗಾಲು ಹಾಕಿ ನಮ್ಮತ್ತ ಬರುತ್ತಿರುವಂತೆ ಆಗೊಮ್ಮೆ ಈಗೊಮ್ಮೆ ತಂಪೆರೆಯುವ ಮಳೆರಾಯ ತನ್ನ ತುಂತುರು ಹನಿಗಳ ಸಿಂಚನದಿಂದ ಮನಸ್ಸಿಗೆ ಮುದಕೊಡುವಂತೆ ಕಳೆದೆರೆಡು ತಿಂಗಳುಗಳಲ್ಲಿ ಅನ್ನಿಸಿರಬಹುದು. ನ್ಯೂ ಜೆರ್ಸಿ ಬೀಚುಗಳಲ್ಲಿ ಕಲರವ ದಿನೇದಿನೇ ಹೆಚ್ಚುತ್ತಿದ್ದು ಎಲ್ಲ ಕಡೆಯಿಂದ ಜನರನ್ನು ಆಕರ್ಷಿಸುವ ಪರಿ ಎಂದಿನಂತೆ ಮುಂದುವರೆದಿದೆ.

ಏಪ್ರಿಲ್ ಮೊದಲ ವಾರದಲ್ಲಿ ಸಂಭ್ರಮದಿಂದ ಯುಗಾದಿಯನ್ನು ಆಚರಿಸಿದ ನಮಗೆ ಮೇ ತಿಂಗಳ ಮೊದಲ ವಾರದಲ್ಲಿ ವಿಜಯಪ್ರಕಾಶ್ ಮತ್ತು ತಂಡದವರ ಸಂಗೀತ ಸಂಜೆಯಿಂದ ಮನಸ್ಸು ಪುಳಕಿತವಾಯಿತು. ಈಶಾನ್ಯ ಕನ್ನಡ ಸಂಘಟನೆಗಳು ಕೈ ಜೋಡಿಸಿ ನಡಿಸಿಕೊಟ್ಟ ಈ ಒಂದು ಸುಂದರ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಿಮಗೆಲ್ಲರಿಗೂ ಧನ್ಯವಾದಗಳು.

ಬೇಸಿಗೆಯಿಂದ ಒಣಗುತ್ತಿರುವ ಕರ್ನಾಟಕದಲ್ಲಿ ಮುಂಗಾರಿನ ನಿರೀಕ್ಷೆ ಬಲವಾಗಿದೆ. ಸುಡುಸುಡು ಬಿಸಿಲಿಗೆ ವರುಣದೇವ ಕರುಣೆ ತೋರಿಸಿ ಮಳೆ ತರಲಿ, "ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೇ ನಾಲ್ಕು ಹನಿಯ ಚೆಲ್ಲಿ..." ಎನ್ನುವುದು ಎಲ್ಲರ ಆಂತರ್ಯದ ಧ್ವನಿಯಾಗಿದೆ.


ಏಪ್ರಿಲ್ ಮೇ ತಿಂಗಳುಗಳಲ್ಲಿ ಅನೇಕ ವಿದ್ಯಮಾನಗಳು ನಡೆದು ಹೋದವು: ದೇಶದಾದ್ಯಂತ ಚುನಾವಣಾ ಭರಾಟೆ. ಮೇ ೨೩ ರಂದು ಚುನಾವಣಾ ಫಲಿತಾಂಶವನ್ನು ವಿಶ್ವವೇ ತನ್ನ ಬೆರಗು ಕಣ್ಣುಗಳಿಂದ ನಿರೀಕ್ಷಿಸುತ್ತಿತ್ತು ಎಂದರೆ ತಪ್ಪಾಗಲಾರದು. ಎಲ್ಲ ಸಾಮಾಜಿಕ ಮಾಧ್ಯಮ ಹಾಗೂ ಹರಟೆ ಕಟ್ಟೆಗಳಲ್ಲಿ ಚುನಾವಣಾ ಸಂಬಂಧಿ ವಿಷಯಗಳ ಚರ್ಚೆಯೇ! ಹೆಚ್ಚಿನ ಜನರ ನಿರೀಕ್ಷೆಯಂತೆ ಮತ್ತೊಮ್ಮೆ ಮೋದಿ ಸರ್ಕಾರ ಭರ್ಜರಿ ಬಹುಮತದೊಂದಿಗೆ ಆಡಳಿತಕ್ಕೆ ಬರುವುದರ ಮೂಲಕ ಇನ್ನೈದು ವರ್ಷದ ಸ್ಥಿರ ಸರ್ಕಾರ ನಮಗೆಲ್ಲರಿಗೂ ಸಿಗುವುದೆಂಬ ನಂಬಿಕೆ. ಇನ್ನೇನು ಚುನಾವಣಾ ಜ್ವರ ಮುಗಿಯಿತು ಎನ್ನುವಷ್ಟರಲ್ಲಿ ಈಗಾಗಲೇ ಕ್ರಿಕೆಟ್ ವಿಶ್ವಕಪ್ ಸಂಭ್ರಮ ಶುರುವಾಗಿದೆ. ನಮ್ಮ ಭಾರತ ತಂಡ ಹಿಂದೆಂದಿಗಿಂತಲೂ ಬಲಶಾಲಿಯಾಗಿದೆ, ಈ ಬಾರಿ ಗೆಲುವು ನಮ್ಮದೇ ಎನ್ನುವುದು ಕೋಟ್ಯಾಂತರ ಜನರ ಮನದಾಳಲ್ಲಿ ಹುದುಗಿರುವ ಸತ್ಯ. ನಾವು ಎಲ್ಲಿದ್ದರೂ ಹೇಗಿದ್ದರೂ ನಾವು ಭಾರತೀಯರೇ ಎನ್ನುವುದನ್ನು ಒಂದೇ ನಿಮಿಷದಲ್ಲಿ ಸಾಬೀತು ಮಾಡುವ ಶಕ್ತಿ ಕ್ರಿಕೆಟ್‌ಗೆ ಇದೆ!

ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರ ತನ್ನ ಬಿಗುವನ್ನು ಕಳೆದುಕೊಳ್ಳುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಸರ್ಕಾರದ ಅಭ್ಯರ್ಥಿಗಳ ಸೋಲು ಎಂಥ ಕೆಚ್ಚೆದೆಯ ನಾಯಕರ ಸ್ಥೈರ್ಯವನ್ನು ಕಸಿದು ಅಳುಕನ್ನು ಮೂಡಿಸಬಲ್ಲದು. ಹೀಗೆ ಕುಗ್ಗಿರುವ ನೈತಿಕ ನೆಲೆಗಟ್ಟು ಕರ್ನಾಟಕದಲ್ಲಿ ಒಂದು ಅಸ್ಥಿರತೆಯನ್ನು ಹುಟ್ಟು ಹಾಕುತ್ತಿದೆ. ಈ ಎಲ್ಲವನ್ನು ಗೆಲ್ಲಬಲ್ಲ ನಾಯಕನ ಅಗತ್ಯವಿದೆ.

ಈ ಸಂಚಿಕೆಯ ವಿಶೇಷ: ವೈಚಾರಿಕ ಲೇಖನಗಳು ಮತ್ತು ಪ್ರಬಂಧಗಳು. **ಮುಖಪುಟದಲ್ಲಿ ಕರ್ನಾಟಕದ ಐತಿಹಾಸಿಕ ಸ್ಥಳವೊಂದರ ಚಿತ್ರವನ್ನು ಪ್ರಕಟಿಸಿದ್ದೇವೆ. ಇದು ಎಲ್ಲಿಯದು ಎಂದು ಊಹಿಸಿ,** ಜೊತೆಗೆ ನಿಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ತಪ್ಪದೇ ತಿಳಿಸಿ.

ಜುಲೈ ೧೩ರಂದು ಡೋನಾಲ್ಡ್‌ಸನ್ ಪಾರ್ಕ್‌ನಲ್ಲಿ ನಡೆಯುವ ಬೃಂದಾವನ ವಿಹಾರದಲ್ಲಿ ಭಾಗವಹಿಸಲು ಮರೆಯದಿರಿ... ಮತ್ತೆ ಸಿಗೋಣ.

ಪ್ರಧಾನ ಸಂಪಾದಕ,



**ಸತೀಶ್ ಹೊಸನಗರ**

**ಸಂಪಾದಕ ಮಂಡಳಿ:**

**ದಾಶರಥಿ ಘಟ್ಟು, ಅಜೇಯ ರಾವ್, ಲಕ್ಷ್ಮಿ ಕೋಲಾಲ, ಬಿಂದುಮಾಧವಿ ಪಾಲಾಕ್ಷಪ್ಪ, ಶ್ರೀವಿದ್ಯಾ ಪ್ರಶಾಂತ್, ರಘುರಾಂ ರಾಯಸಂ.**



**ಪ್ರಕಾಶಕರು:**

ಬೃಂದಾವನ ಕನ್ನಡ ಸಂಘ

501(3)(c) ಪಡೆದ ಚಾರಿಟಿ ಸಂಸ್ಥೆ

Karnataka Cultural Organization (KCO) Brindavana
New Jersy, USA

www.Brindavana.org



© 2019.  All right reserved.  No part of this newsletter may be reproduced, photocopied, or reused without prior permission from the publisher.


ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು.  "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು.  ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ.

ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ:**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ.  ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ.  ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ.  ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.Brindavana.org ಅನ್ನ್ ವಿಸಿಟ್ ಮಾಡಿ, ನಿಮ್ಮ ವಿವರಗಳನ್ನು ನೀಡಿ ಸದಸ್ಯತ್ವವನ್ನು ಪಡೆಯಿರಿ.  ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org

# ಅಧ್ಯಕ್ಷರ ನುಡಿ



ನಮ್ಮ ನ್ಯೂ ಜೆರ್ಸಿಯ ವಿಶೇಷಗಳಲ್ಲಿ ಒಂದು ಎಂದರೆ ಇಲ್ಲಿ ಸೀಜನ್ನುಗಳು ಬದಲಾಗುವ ರೀತಿ. ವಸಂತದಿಂದ ಬೇಸಿಗೆ, ಬೇಸಿಗೆಯಿಂದ ಮರಗಿಡಗಳೆಲ್ಲ ಎಲೆ ಉದುರಿಸಿಕೊಂಡು ಛಳಿಗೆ ಮುಖ ಒಡ್ಡುವ ರೀತಿ ವಿಶೇಷವಾಗಿ ಕಂಡುಬರುತ್ತದೆ. ಈ ಮಡಗಿರಗಳ ಎಲೆಗಳೆಲ್ಲ ಕೆಂಪು ಬಣ್ಣವನ್ನು ಸಿಂಪಡಿಸಿಕೊಂಡು ಅಲಂಕೃತಗೊಳ್ಳುವುದನ್ನು ನೋಡಲು ಎರಡು ಕಣ್ಣು ಸಾಲದು. ಎಲ್ಲಿ ಛಳಿಗಾಲಕ್ಕೆ ಮಹತ್ವವಿದೆಯೋ ಅಲ್ಲಿ ಬಿಸಿಲುಗಾಲಕ್ಕು ಕೂಡ ಅಷ್ಟೇ ಮಹತ್ವವಿದೆ ಎನ್ನುವಂತೆ ಬೇಸಿಗೆಯಲ್ಲಿ ಇಲ್ಲಿನ ಉದ್ದಾನುದ್ದದ ಬೀಚುಗಳು ಜನರಿಂದ ಕಂಗೊಳಿಸುವಂತಾಗುವುದು. ನಮ್ಮ ಶಾಲಾ ಮಕ್ಕಳು ತಮ್ಮ ಪರೀಕ್ಷೆಗಳನ್ನು ಮುಗಿಸಿ ಇನ್ನೆರಡು ವಾರಗಳಲ್ಲಿ ತಮ್ಮ ಬೇಸಿಗೆಯ ರಜೆಯನ್ನು ಆರಂಭಿಸುವ ಗುಂಗಿನಲ್ಲಿದ್ದಾರೆ. ತಂದೆ–ತಾಯಂದಿರು ಕಳೆದ ತಿಂಗಳ ಲೋಕಸಭಾ ಚುನಾವಣೆಯ ಭರಾಟೆ ಮತ್ತು ಫಲಿತಾಂಶಗಳ ಚರ್ಚೆಗಳಿಂದ ಹೊರಗೆ ಬಂದಿರಬಹುದು.

ಇಲ್ಲಿ ಬಿಸಿಲು ಅಂಬೆಗಾಲು ಇಟ್ಟುಕೊಂಡು ಬಂದ ಹಾಗೆ ನಮ್ಮ ಸೌರಭ ತಂಡದ ಪದಾಧಿಕಾರಿಗಳೆಲ್ಲ ಸೇರಿ ವರ್ಷ ಪೂರ್ತಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ವಸಂತನ ಆಗಮನದಿಂದ ನಾವು ಕಾರ್ಯಕ್ರಮಗಳನ್ನು ಆರಂಭಮಾಡಿ ನಮ್ಮ ಯುಗಾದಿ ಕಾರ್ಯಕ್ರಮದಲ್ಲಿ ಸ್ಥಳೀಯ ಶಾಲಾ ಮಕ್ಕಳ ಕಾರ್ಯಕ್ರಮದೊಂದಿಗೆ ಶ್ರೀಮತಿ ಶುಭಾ ಧನಂಜಯ ಮತ್ತು ಮಕ್ಕಳಿಂದ ನೃತ್ಯ ಕಾರ್ಯಕ್ರಮಗಳನ್ನು ನೀವೆಲ್ಲ ನೋಡಿರುತ್ತೀರಿ. ಮೇ ತಿಂಗಳಿನಲ್ಲಿ, ಈಶ್ಯಾನ್ಯ ಕನ್ನಡ ಸಂಘಟನೆಗಳ ಸಹಯೋಗದೊಂದಿಗೆ, ಗಾಯಕ ವಿಜಯಪ್ರಕಾಶ್ ಮತ್ತು ತಂಡದವರಿಂದ ಭಾರತೀಯ ಸೈನಿಕರ ಸಹಾಯಾರ್ಥವಾಗಿ ಸಂಗೀತ ಸಂಜೆಯನ್ನು ಏರ್ಪಡಿಸಿ ಅದ್ದೂರಿಯಾಗಿ ನಡೆಸಿಕೊಟ್ಟೆವು. ಇದೇ ಸಂದರ್ಭದಲ್ಲಿ ಕನ್ನಡ ಬಿಸಿನೆಸ್ ಕಮ್ಮ್ಯುನಿಟಿ ಮತ್ತು ಆರೋಗ್ಯ ಬೃಂದಾವನದ ವತಿಯಿಂದ ಧನ್ವಂತರಿ (ಡಾಕ್ಟರ್ಸ್) ಕಮ್ಮ್ಯುನಿಟಿ ಎಂಬೆರೆಡು ಹೊಸ ವೇದಿಕೆಗಳನ್ನು ಹುಟ್ಟು ಹಾಕಿದೆವು. ಬಿಸಿನೆಸ್ ಕಮ್ಯುನಿಟಿಯ ಮೂಲಕ ನಮ್ಮ ನಡುವಿನಲ್ಲಿ ಇರುವ ಹೊಸ ಬಿಸಿನೆಸ್ ಒನರುಗಳಿಗೆ ಹಿರಿಯರಿಂದ ಮಾರ್ಗದರ್ಶನ ಸಿಗುವುದರ ಜೊತೆಗೆ ತಮ್ಮ ಅನುಭವವನ್ನು ಹಂಚಿಕೊಳ್ಳಲು ಅನುಕೂಲವಾಗಲಿ. ಹಾಗೇ ಆರೋಗ್ಯ ಬೃಂದಾವನದ ಕಾರ್ಯಕ್ರಮಗಳು ಒಂದು ರೀತಿಯಲ್ಲಿ ಎಜುಕೇಷನ್ ಸೀರೀಸ್ ಹಾಗೆ ಬೆಳೆಯಬೇಕು ಎನ್ನುವುದು ನಮ್ಮ ಕಲ್ಪನೆ. ಈ ವೇದಿಕೆಯಲ್ಲಿ ಆರೋಗ್ಯ ಸಂಬಂಧಿ ವಿಚಾರಧಾರೆ ಇನ್ನೂ ಹೆಚ್ಚು ಜನರನ್ನು ತಲುಪಬೇಕು ಎಂಬುದು ನಮ್ಮ ಆಶಯ. ನಮ್ಮ ಕನ್ನಡ ಶಾಲೆಗಳ ಜನಪ್ರಿಯತೆ ದಿನೇದಿನೇ ಹೆಚ್ಚುತ್ತಾ ಹಿಲ್ಸ್‌ಬೊರೋ ಕಮ್ಯುನಿಟಿಯಲ್ಲಿ ನಮ್ಮ ನಾಲ್ಕನೇ ಶಾಲೆಯನ್ನು ಅದ್ದೂರಿಯಾಗಿ ಸೆಪ್ಟೆಂಬರ್‌ನಿಂದ ಆರಂಭಿಸುತ್ತಿದ್ದೇವೆ. ಮುಂದಿನ ತಿಂಗಳು, ಜುಲೈ ೧೪ರಂದು ಬೃಂದಾವನ ಪಿಕ್‌ನಿಕ್ ಕಾರ್ಯ್ರಕ್ರಮಕ್ಕೆ ನೀವೆಲ್ಲರೂ ಬಂದು ಯಶಸ್ವಿಗೊಳಿಸಿಕೊಡಬೇಕು ಎಂಬುದಾಗಿ ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಮೇ ತಿಂಗಳಿನಲ್ಲಿ ಕನ್ನಡ ಸಾಹಿತ್ಯ ರಂಗದ ವತಿಯಿಂದ ಎರಡು ದಿನಗಳ ವಸಂತ ಸಾಹಿತ್ಯೋತ್ಸವದಲ್ಲಿ ನೀವೆಲ್ಲ ಪಾಲ್ಗೊಂಡಿದ್ದಿರಿ. ಈ ಸಮಾರಂಭದಲ್ಲಿ " ಬದಲಾವಣೆ" ಯನ್ನು ವಸ್ತುವಾಗಿಸಿಕೊಂಡು ಮುಖ್ಯ ಅತಿಥಿ ವಸುಧೇಂದ್ರ ಅವರ ಅಧ್ಯಕ್ಷತೆಯಲ್ಲಿ ಅನೇಕ ಪುಸ್ತಕಗಳು ಲೋಕಾರ್ಪಣೆಗೊಂಡವು. ಅಲ್ಲಿನ ವಿಚಾರ ಸಂಕಿರಣಗಳು, ಕಮ್ಮಟಗಳಿಂದ ಮನಸೂರೆಗೊಂಡಿತು. ಜೊತೆಗೆ ಅನೇಕ ವರ್ಷಗಳಿಂದ ಒಡನಾಡಿದ ಹಲವಾರು ಸ್ನೇಹಿತರ ಮಧ್ಯೆ ಕೆಲ ಕಾಲ ಕಳೆಯುವಂತಾಗಿದ್ದು ನಮ್ಮ ಭಾಗ್ಯ ಎಂದೇ ಹೇಳಬೇಕು. ಜೂನ್ ಮೊದಲ ವಾರದಲ್ಲಿ, ಕನ್ನಡ ಸಿನಿಮಾ ನಟ ಸಾಯಿಕುಮಾರ್ ಅವರು ತಮ್ಮ ೨೪ ವರ್ಷಗಳ ಸಿನಿಮಾ ಸಂಭ್ರಮವನ್ನು ನಮ್ಮೆಲ್ಲರ ಜೊತೆಗೆ ಹಂಚಿಕೊಂಡರು. ಬಹು ಭಾಷೆಯಲ್ಲಿ ತಮ್ಮ ಧ್ವನಿಯನ್ನು ಅನೇಕ ಹಿರಿಯ ನಟರಿಗೆ ನೀಡಿರುವುದಷ್ಟೇ ಅಲ್ಲದೇ, ತಮ್ಮದೇ ಆದ ವಿಶೇಷ ಡೈಲಾಗುಗಳ ವರ್ಚಸ್ಸಿನಿಂದ ಗುರುತಿಸಿಕೊಂಡವರು. ಸಿನಿಮಾ ರಂಗದಲ್ಲಷ್ಟೇ ಅಲ್ಲ, ರಾಜಕೀಯದಲ್ಲೂ ಪಳಗುತ್ತಿರುವ ಇವರ ಕನ್ನಡ ಜನಪರ ಚಿಂತನೆಗಳು ನಮ್ಮೆಲ್ಲರಿಗೂ ಮಾದರಿಯಾಗಲಿ.




ಈ ಕಂತಿನ ಬೃಂದಾವನ ವಾಣಿ ವಿಶೇಷವಾಗಿ ಮೂಡಿಬಂದಿದೆ. ವಿನ್ಯಾಸದಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು ಜೂನ್ ದ್ವೈ ಮಾಸಿಕ ಬೃಂದಾವನ ವಾಣಿಯ ಮೂಲಕ ಅನೇಕ ವೈಚಾರಿಕ ಲೇಖನಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ, ನಿಮ್ಮ ಅನಿಸಿಕೆಗಳನ್ನು ತಪ್ಪದೇ ಹಂಚಿಕೊಳ್ಳಿ.

ತಮ್ಮ ವಿಶ್ವಾಸಿ,
ಸತೀಶ್ ಹೊಸನಗರ
ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ
**ಸೌರಭ ತಂಡದ ಪರವಾಗಿ**


KARNATAKA CULTURAL ORGANIZATION BRINDAVANA (KCOB) NJ, USA
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ
ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ
ಸೌರಭ ತಂಡ ಏರ್ಪಡಿಸಿರುವ
ವನವಿಹಾರ
Brindavana Picnic - 2019
"ಓಟ, ಆಟ, ಊಟ, ಮೋಜು, ಮಸ್ತಿ"
Cricket
Kids Games
Running Race
Yoga
Volley Ball
Enjoy a fun filled day with Friends & Family
REGISTER NOW!
Register Online at:
brindavana.org
Lunch
12:00 - 1:30 pm
Snacks
4:00 - 5:00 pm
-- Registration Fee --
Members: Free, Non-Members: $5
Saturday, July 13th 2019 | 10:30 AM - Evening
Grove 1 Donaldson Park, South 2nd Ave, Highland Park, NJ 08904.
Members please RSVP before June 15th

# ಅಂತರಂಗದ ಅನ್ವೇಷಣೆ – ಯೋಗ ಎಂದರೇನು



ಡಾ|| ಎಂ ಜಿ ಪ್ರಸಾದ್

**ಯೋಗವೆಂದರೇನು?**

ಮನುಷ್ಯನಿಗೆ ಹುಟ್ಟಿನಿಂದಲೇ ಬರುವ ಗುಣವೆಂದರೆ ಕುತೂಹಲ (*curiosity*). ಈ ಸಹಜ ಗುಣದಿಂದಲೇ ಮನುಷ್ಯನು ಮಗುವಾಗಿದ್ದಾಗಿಂದಾಗಲೇ ಈ ಜಗತ್ತನ್ನು ಅರಿಯಲನುವಾಗುತ್ತಾನೆ. ಹಾಗೆ-ಯೇ ಮನುಷ್ಯನು ಶೈಶವಾವಸ್ಥೆಯಿಂದ ಯೌವನಾವಸ್ಥೆಗೆ ಹೋಗುತ್ತಿರುವಾಗ ಕುತೂಹಲದ ಮಟ್ಟದಿಂದ ವೈಚಾರಿಕ ಪ್ರಜ್ಞೆ ಬೆಳೆದು ಜಗತ್ತಿನಲ್ಲಿ ಎಲ್ಲವನ್ನೂ ಅನ್ವೇಷಣೆಯ ದೃಷ್ಟಿಯಿಂದ ಅರಿಯಲನುವಾಗುತ್ತಾನೆ. ಈ ಅನ್ವೇಷಣೆಗೆ ಬೇಕಾದ ಮುಖ್ಯ ಸಾಧನೆಗಳೇ ಇಂದ್ರಿಯಗಳು, ಮನಸ್ಸು ಹಾಗೂ ಬುದ್ಧಿ. ಈ ರೀತಿಯೇ ಎಲ್ಲ ದೇಶಗಳಲ್ಲಿಯೂ ಹಾಗೂ ಎಲ್ಲ ಕಾಲಗಳಲ್ಲಿಯೂ ಅನ್ವೇಷಣೆಗಳು ನಡೆಯುತ್ತಲೇ ಇವೆ. ಈ ರೀತಿ ವಿಶ್ವಾದ್ಯಂತ ನಡೆದ ಅನ್ವೇಷಣೆಗಳ ಇತಿಹಾಸದಲ್ಲಿ ಎಲ್ಲಾ ಮನುಷ್ಯರಿಗೂ ಅನ್ವಯವಾಗುವಂತಹ ಅನ್ವೇಷಣಾ ಮಾರ್ಗವೊಂದು ಭಾರತದ ಋಷಿಗಳು ಅನ್ವೇಷಣೆ ಮಾಡಿ ರೂಪಿಸಿದ "ಯೋಗ ಮಾರ್ಗ". ವಿಶ್ವಾದ್ಯಂತ ಇಂದು "ಯೋಗ" ಮತ್ತು "ಧ್ಯಾನ" ಎಂಬ ಎರಡು ಪದಗಳು ಎಲ್ಲೆಡೆಯಲ್ಲಿಯೂ ಕೇಳಿ ಬರುತ್ತಿದೆ. ಆದರೆ "ಧ್ಯಾನ" ಎನ್ನುವುದು ಅಷ್ಟಾಂಗಯೋಗದಲ್ಲಿ ಒಂದು ಅಂಗವಾಗಿರುವುದರಿಂದ ಮೊದಲು "ಯೋಗವೆಂದರೇನು?" ಎಂದು ವಿಚಾರ ಮಾಡೋಣ.

**ಯೋಗ ಹಾಗೂ ಜೀವನದ ಬಗ್ಗೆ ಪ್ರಶ್ನೆಗಳು**

ಯೋಗ ಎಂದೊಡನೆ ಕೆಲವು ಪ್ರಶ್ನೆಗಳು ಮುಂದೆ ಬರುತ್ತವೆ.

- ಯೋಗವು ಯಾವ ಮಟ್ಟದ್ದು? ದೈಹಿಕ ಅಥವಾ ಆಧ್ಯಾತ್ಮಿಕ?
- ಯೋಗಕ್ಕೂ ಹಾಗೂ ಹಿಂದೂ ಮತಕ್ಕೂ ಏನು ಸಂಬಂಧ?
- ಯೋಗದಿಂದ ಆಗುವ ಉಪಯೋಗಗಳೇನು?

ಯೋಗದ ಬಗ್ಗೆ ಈ ರೀತಿಯ ಪ್ರಶ್ನೆಗಳಾದರೆ, ಮನುಷ್ಯ ಜನಾಂಗದ ಆರಂಭದ ಕಾಲದಿಂದಲೂ ಮನುಷ್ಯನು ಅನೇಕ ಪ್ರಶ್ನೆಗಳನ್ನು ತನ್ನ ಬಗ್ಗೆಯೇ ಕೇಳುತ್ತಿರುತ್ತಾನೆ. ಕೆಲವು ಪ್ರಶ್ನೆಗಳು ಈ ರೀತಿಯಾಗಿವೆ:

- ನಾನು ಯಾರು? ನಾನು ಏತಕ್ಕಾಗಿ ಹುಟ್ಟಿದ್ದೇನೆ?
- ಮರಣವೆಂದರೇನು?
- ನನ್ನ ಜೀವನದ ಗುರಿಯೇನು?
- ಸುಖ ಹಾಗೂ ದುಃಖಗಳೆಂದರೇನು? ಸದಾ ಶಾಂತಿ ಹಾಗೂ ಆನಂದದಿ ಇರಲು ಸಾಧ್ಯವೇ?

ಯೋಗವು ಹೇಗೆ ಈ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರಗಳನ್ನು ನೀಡುತ್ತದೆ ಎಂದು ವಿವರಿಸುವ ಸಂಕ್ಷಿಪ್ತ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

**ಯೋಗದ ಬಗ್ಗೆಯ ಪ್ರಶ್ನೆಗಳಿಗೆ ಸಮಾಧಾನ**

ಯೋಗ ಎನ್ನುವ ಪದವು "ಯುಜ್" ಎಂದರೆ "ಕೂಡಿಸು" ಎನ್ನುವ ಧಾತುವಿನಿಂದ ರೂಪುಗೊಂಡಿದೆ. ಇಲ್ಲಿ ಕೂಡಿಸು ಎಂದರೆ ಒಂದುಗೂಡಿಸುವುದು ಎಂದಾಗುತ್ತದೆ. ಇನ್ನೊಂದು ರೀತಿಯಲ್ಲಿ ಸಾಧಕನನ್ನು (ಅಥವಾ ಸಾಧಕಿಯನ್ನು) ಅವನ (ಅಥವಾ ಅವಳ) ಗುರಿಯೊಂದಿಗೆ ಒಂದುಗೂಡಿಸುವ ಸಾಧನಾ ಮಾರ್ಗವೇ ಯೋಗ ಅಥವಾ ಯೋಗಮಾರ್ಗ. ಯೋಗ ಬರೀ ತತ್ವ ಚಿಂತನೆಯಷ್ಟೇ ಅಲ್ಲದೆ, ಅದು ಜೀವನದಲ್ಲಿ ಅಳವಡಿಸಿಕೊಂಡು ಅನುಷ್ಠಾನದಲ್ಲಿ ತರುವ ಸಾಧನಾ ಮಾರ್ಗ. ಶ್ರೀಮದ್ಭಗವದ್ಗೀತೆಯನ್ನು ಯೋಗಶಾಸ್ತ್ರ ಎಂದು ಹೇಳಿದೆ. ಅಂದರೆ ಶ್ರೀಮದ್ಭಗವದ್ಗೀತೆಯಲ್ಲಿ ತತ್ವಗಳ ಜೊತೆಗೆ ಯೋಗಮಾರ್ಗಗಳ ಬಗ್ಗೆಯೂ ವಿವರಗಳಿವೆ. ಶ್ರೀಕೃಷ್ಣನನ್ನು "ಯೋಗೇಶ್ವರ" ಎಂದರೆ "ಯೋಗಮಾರ್ಗದ ಈಶ್ವರ ಅಂದರೆ ಪ್ರವರ್ತಕ" ಎನ್ನುವುದರ ಜೊತೆಗೆ, "ಯೋಗೀಶ್ವರ" ಎಂದರೆ "ಯೋಗಿಗಳಿಗೆ ಈಶ್ವರ ಅಂದರೆ ಒಡೆಯ" ಎಂದೂ ಕರೆಯುತ್ತಾರೆ. ಶ್ರೀಕೃಷ್ಣನು ಅದಕ್ಕಾಗಿ ಶ್ರೀಮದ್ಭಗವದ್ಗೀತೆಯಲ್ಲಿ ಅರ್ಜುನನಿಗೆ "ತಸ್ಮಾದ್ಯೋಗಿ ಭವಾರ್ಜುನ", ಎಂದರೆ "ಆದ್ದರಿಂದ ಅರ್ಜುನನೇ ಯೋಗಿಯಾಗು" ಎಂದು ರಣಾಂಗಣದಲ್ಲಿ ಧರ್ಮಯುದ್ಧದ ಆರಂಭದಲ್ಲಿ ಉಪದೇಶ ನೀಡುತ್ತಾನೆ.

ಯೋಗವೆಂದರೇನು? ಎಂಬ ಪ್ರಶ್ನೆಗಳಿಗೆ ಉತ್ತರಗಳು ಈ ಕೆಳಗಿನಂತಿವೆ.

೧) ಯೋಗವೆಂದರೆ ಚಿತ್ತವನ್ನು (ಮನಸ್ಸನ್ನು) ಹತೋಟಿಯಲ್ಲಿಡುವುದು.
೨) ಯೋಗವೆಂದರೆ ದುಃಖದ ಜೊತೆಗೆ ಸಂಬಂಧ ಕಡಿಯುವುದು.
೩) ಯೋಗವೆಂದರೆ ಎಲ್ಲವನ್ನೂ ಸಮತ್ವದಿಂದ ನೋಡುವುದು.
೪) ಯೋಗವೆಂದರೆ ದ್ವಂದ್ವಗಳನ್ನು ತೆಗೆದು ಏಕತ್ವವನ್ನು ತರುವುದು.
೫) ಯೋಗವೆಂದರೆ ಜೀವಾತ್ಮ ಹಾಗೂ ಪರಮಾತ್ಮನ ಒಂದುಗೂಡುವಿಕೆ.

ಈ ಮೇಲಿನ ಉತ್ತರಗಳನ್ನು ನೋಡಿದರೆ ನಮಗೆ ಯೋಗದ ವಿಸ್ತಾರ ಅನುಭವ ಉಂಟಾಗುತ್ತದೆ. ನಂತರ ಯೋಗ ದೇಹ, ಪ್ರಾಣಶಕ್ತಿ, ಮನಸ್ಸು, ಬುದ್ಧಿ ಹಾಗೂ ಆತ್ಮ ಎಲ್ಲವನ್ನೂ ಒಳಗೊಂಡಿದೆ. ಯೋಗದ ವಿಸ್ತಾರ ಅಪಾರವಾದದ್ದು. ಅದು ಸನಾತನ ಧರ್ಮದ ಋಷಿಗಳ ನಿರಂತರ ಸಾಧನೆಯಿಂದ ರೂಪುಗೊಂಡಿದೆ. ಯೋಗವು ಎಲ್ಲ ಮಟ್ಟಗಳಲ್ಲೂ- ಎಂದರೆ ಮನುಷ್ಯನ ವೈಯುಕ್ತಿಕ ಜೀವನದ ಎಲ್ಲಾ ಭಾಗಗಳಿಗೂ ಹಾಗೂ ಸಮಾಜದಲ್ಲಿಯೂ ಸಾಮರಸ್ಯವನ್ನು ತರುತ್ತದೆ. ಮುಖ್ಯವಾಗಿ ತಿಳಿಯಬೇಕಾಗಿರುವುದೇನೆಂದರೆ ಜನಸಾಮಾನ್ಯರು ಯೋಗ ಮತ್ತು ಯೋಗಾಸನಗಳು ಒಂದೇ ಎನ್ನುವಂತೆ ಹೇಳುತ್ತಾರೆ. ಇದು ಸರಿಯಲ್ಲ. ಏಕೆಂದರೆ ಯೋಗಾಸನಗಳು, ಯೋಗಮಾರ್ಗದ ಒಂದು ಅಂಗವಷ್ಟೇ. ಯೋಗಾಸನಗಳಲ್ಲಿ ಮಾತ್ರ ನಿಷ್ಣಾತರಾದವರನ್ನು ಯೋಗದಲ್ಲಿ ನಿಷ್ಣಾತ ಎಂದು ಹೇಳಲಾಗುವುದಿಲ್ಲ. ಅಂತಹವರನ್ನು ಯೋಗಾಸನಾಚಾರ್ಯ ಎಂದು ಹೇಳಬಹುದೇ ಹೊರತು ಯೋಗಾಚಾರ್ಯ ಎಂದು ಹೇಳಲಾಗುವುದಿಲ್ಲ. ಮಹರ್ಷಿ ಯಾಜ್ಞವಲ್ಕ್ಯರು "ಅಯಂ ತು ಪರಮೋ ಧರ್ಮಃ

ಯದ್ಯೋಗೇನ ಆತ್ಮದರ್ಶನಮ್ ", ಎಂದರೆ "ನಮ್ಮ ಪರಮ ಧರ್ಮವೆಂದರೆ ಯೋಗದಿಂದ ಆತ್ಮದರ್ಶನವನ್ನು ಸಾಧಿಸಬೇಕು". ಯೋಗಾಸನಗಳು ಯೋಗಮಾರ್ಗದಲ್ಲಿ ಒಂದು ಮೆಟ್ಟಲು. ಮುಂದೆ ಅಷ್ಟಾಂಗಯೋಗದ ಬಗ್ಗೆ ಹೇಳುವಾಗ ಇದರ ಬಗ್ಗೆ ಇನ್ನಷ್ಟು ಸ್ಪಷ್ಟತೆ ಉಂಟಾಗುತ್ತದೆ.

**ಯೋಗಮಾರ್ಗಗಳು**

ಸನಾತನ ಧರ್ಮದ ಸಾಹಿತ್ಯದ ಬುನಾದಿಯಾಗಿರುವ ವೇದೋಪನಿಷತ್ತುಗಳು ಹಾಗೂ ಶ್ರೀಮದ್ಭಗವದ್ಗೀತೆಯಲ್ಲಿ ಯೋಗದ ಬಗ್ಗೆ ಹೇಳಿದೆ. ಶ್ವೇತಾಶ್ವತರೋಪನಿಷತ್ ಹಾಗೂ ಕಠೋಪನಿಷತ್ ಗಳಲ್ಲಿ ಯೋಗದ ಬಗ್ಗೆ ಹೇಳಿದೆ. ಕಠೋಪನಿಷತ್ ನಲ್ಲಿ ಮನುಷ್ಯರೆಲ್ಲರಿಗೂ ಅನ್ವಯವಾಗುವಂತೆ ಶ್ರೀ ಯಮಧರ್ಮರಾಜನು ಬಾಲಕ ನಚಿಕೇತನಿಗೆ ಯೋಗದ ಪ್ರಾಯೋಗಿಕತೆಯನ್ನು ರೂಪಕದ ಮೂಲಕ ಸುಂದರವಾಗಿ ಹೇಳಿದ್ದಾನೆ. ಆ ರೂಪಕದ ವರ್ಣನೆ ಹೀಗಿದೆ:

"ಆತ್ಮನನ್ನು ರಥಿಕನೆಂದೂ, ಶರೀರವನ್ನು ರಥವೆಂದೂ ತಿಳಿ. ಬುದ್ಧಿಯನ್ನು ಸಾರಥಿ ಎಂದೂ, ಮನಸ್ಸನ್ನು ಕಡಿವಾಣವೆಂದೂ ತಿಳಿ. ಇಂದ್ರಿಯಗಳನ್ನು ಕುದುರೆಗಳೆಂದು ಹೇಳುವರು. ಅವುಗಳಿಗೆ ವಿಷಯಗಳಾದ ಶಬ್ದ, ಸ್ಪರ್ಶ, ರೂಪ, ರಸ, ಹಾಗೂ ಗಂಧಗಳನ್ನು ಅವುಗಳ ಸಂಚಾರದ ಮಾರ್ಗಗಳೆಂದು ಹೇಳುವರು. ಇಂದ್ರಿಯ ಹಾಗೂ ಮನಸ್ಸುಗಳನ್ನು ಕೂಡಿದ ಆತ್ಮನನ್ನು "ಭೋಕ್ತಾ" (ಅನುಭವಿಸುವವನು, ತಿನ್ನುವವನು) ಎಂದು ಮನೀಷಿಗಳು ಹೇಳುತ್ತಾರೆ. ಯಾವನು ವಿಜ್ಞಾನಹೀನನಾಗಿರುತ್ತಾನೋ, ಯಾವನ ಮನಸ್ಸು ಸರ್ವದಾ ಹತೋಟಿಯಲ್ಲಿರುವುದಿಲ್ಲವೋ ಅವನ ಇಂದ್ರಿಯಗಳು ಹತೋಟಿಯಲ್ಲಿ ಇಲ್ಲದ ಕುದುರೆಗಳು ಸಾರಥಿಗೆ ಹೇಗೋ ಹಾಗೆ ವಶದಲ್ಲಿ ಇಲ್ಲದಿರುತ್ತವೆ. ಯಾವನು ವಿಜ್ಞಾನಸಹಿತನಾಗಿ ಇರುತ್ತಾನೆಯೋ, ಯಾವನ ಮನಸ್ಸು ಸದಾ ಹತೋಟಿಯಲ್ಲಿರುವುದೋ ಅವನ ಇಂದ್ರಿಯಗಳು–ಒಳ್ಳೆಯ ಕುದುರೆಗಳು ಸಾರಥಿಗೆ ಹೇಗೋ ಹಾಗೆ ವಶದಲ್ಲಿರುತ್ತವೆ. ಯಾವನು ವಿಜ್ಞಾನ ವಿಹೀನವಾಗಿರುವನೋ, ಮನಸ್ಸನ್ನು ಸರ್ವದಾ ಹತೋಟಿಯಲ್ಲಿ ಹೊಂದದೆ ಇರುವನೋ ಅಥವಾ ಸರ್ವದಾ ಅಶುಚಿಯಲ್ಲಿರುತ್ತಾನೆಯೋ ಅವನು ಯೋಗದ ಉತ್ತಮ ಸ್ಥಿತಿಯನ್ನು ಹೊಂದುವುದಿಲ್ಲ. ಅದಕ್ಕೆ ಪ್ರತಿಯಾಗಿ ಅವನು ಸಂಸಾರದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ. ಯಾವನು ವಿಜ್ಞಾನ ಸಹಿತವಾಗಿರುತ್ತಾನೆಯೋ, ಮನಸ್ಸನ್ನು ಸರ್ವದಾ ಹತೋಟಿಯಲ್ಲಿ ಹೊಂದಿರುತ್ತಾನೆಯೋ ಮತ್ತು ಸರ್ವದಾ ಶುಚಿಯನ್ನು ಹೊಂದಿರುತ್ತಾನೆಯೋ ಅವನು ಆ ಸ್ಥಾನವನ್ನು (ಶಾಂತಿ, ಆನಂದ) ಹೊಂದುತ್ತಾನೆ. ಅವನು ಅಲ್ಲಿಂದ ಮತ್ತೆ ಇಲ್ಲಿಗೆ ಹುಟ್ಟಿ ಬರುವುದಿಲ್ಲ. ಯಾವನು (ಪರಮಾತ್ಮನನ್ನು ಪಡೆಯುವ) ವಿಜ್ಞಾನವನ್ನು ಸಾರಥಿಯಾಗಿ ಪಡೆದಿರುವನೋ, ಯಾವನ ಕೈಯ್ಯಲ್ಲಿ ಮನಸ್ಸೆಂಬ ಕಡಿವಾಣವು ಚೆನ್ನಾಗಿ ಹಿಡಿಯಲ್ಪಟ್ಟಿರುತ್ತದೆಯೋ ಅವನು ಕುಶಲತೆಯಿಂದ ದಾರಿಯ ಕೊನೆಯನ್ನು ಮುಟ್ಟುತ್ತಾನೆ. ಅದೇ ವಿಷ್ಣುವಿನ ಪರಮಪದ." ಈ ವಿವರಪೂರ್ಣ ರೂಪಕವು ಸಾರ್ವಕಾಲಿಕವೂ ಹಾಗೂ ಸಾರ್ವದೇಶಿಕವಾದ ಪ್ರಜ್ಞೆಯಿಂದ ಕೂಡಿದೆ. ಇದು ಯೋಗದ ರೂಪವನ್ನು ಸುಂದರವಾಗಿ ನಿರೂಪಿಸುವ ಸರಳವಾದ ರೂಪಕ.

**ಯೋ**ಗಮಾರ್ಗದಲ್ಲಿ ಪ್ರಗತಿಯನ್ನು ಸಾಧಿಸಲು ಅನೇಕ ರೀತಿಯ ಯೋಗಗಳಿವೆ. ಅವುಗಳೇ ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ, ರಾಜಯೋಗ, ಮಂತ್ರಯೋಗ, ನಾದಯೋಗ, ಹಠಯೋಗ, ಲಯಯೋಗ ಮುಂತಾದುವು. ಭಗವದ್ಗೀತೆಯಲ್ಲಿ ವಿಶೇಷವಾಗಿ ಮತ್ತು ಸಾಮಾನ್ಯವಾಗಿ ಪ್ರಚಲಿತವಾಗಿರುವುದು ನಾಲ್ಕು ಯೋಗಗಳು. ಅವುಗಳೇ ಭಕ್ತಿ, ಕರ್ಮ, ಜ್ಞಾನ ಹಾಗೂ ರಾಜಯೋಗ. ಅಷ್ಟಾಂಗಯೋಗವನ್ನು ರಾಜಯೋಗವೆಂದು ಕರೆಯುವುದುಂಟು. ಭಕ್ತಿ, ಕರ್ಮ ಹಾಗೂ ಜ್ಞಾನಯೋಗಗಳು ಭಗವದ್ಗೀತೆಯಲ್ಲಿ ವಿವರವಾಗಿ ಹೇಳಲಾಗಿದೆ. ರಾಜಯೋಗವು ಭಗವದ್ಗೀತೆಯಲ್ಲಿ ಹೇಳಿದೆಯಾದರೂ ಅಷ್ಟಾಂಗಯೋಗದ ರೂಪಿನಲ್ಲಿ ಮಹರ್ಷಿ ಪತಂಜಲಿಗಳ ಯೋಗಸೂತ್ರಗಳಲ್ಲಿ ಕ್ರಮಬದ್ಧವಾಗಿ ನಿರೂಪಿತವಾಗಿದೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ ಎಲ್ಲಾ ರೀತಿಯ ಯೋಗಗಳು ಒಂದಕ್ಕೊಂದು ಪೂರಕವಾಗಿವೆ. ಅಂದರೆ ಉದಾಹರಣೆಗೆ ಭಕ್ತಿಯೋಗವೆಂದಾಗ ಭಕ್ತಿಯ ಪ್ರಧಾನ ಸಾಧನವಾಗಿ ಮಿಕ್ಕ ಯೋಗಗಳು ಅಂದರೆ ಕರ್ಮ, ಜ್ಞಾನ ಮುಂತಾದುವು ಸಹಕಾರಿಯಾಗುತ್ತವೆ. ಇದು ನಿಜ. ಏಕೆಂದರೆ ಕಪಟವಿಲ್ಲದ ಅನನ್ಯವಾದ ಶುದ್ಧಭಕ್ತಿಯನ್ನು ಸಾಧಿಸಿ ಪರಮಾತ್ಮನಿಗೆ ಶರಣಾಗಬೇಕಾದರೆ ಮಿಕ್ಕ ಯೋಗಗಳ ಪೂರಕ ಸಹಾಯ ಅತ್ಯಗತ್ಯ. ಹಾಗೆಯೇ ನಿಷ್ಕಾಮ ಕರ್ಮದಿಂದ ಎಲ್ಲ ಕರ್ಮವನ್ನೂ ಭಗವತ್ ಸೇವೆ ಹಾಗೂ ಭಗವತ್ಪ್ರೀತಿಗಾಗಿ ಅರ್ಪಿಸಬೇಕು. ಹಾಗೆಯೇ ಪರಮಾತ್ಮನ ಪರಿಶುದ್ಧ ಜ್ಞಾನಕ್ಕೆ ಎಲ್ಲ ರೀತಿಯ ಶುದ್ಧತೆಯನ್ನು ಸಾಧಿಸಬೇಕು.

**ಅಷ್ಟಾಂಗಯೋಗ**

ಅಷ್ಟಾಂಗಯೋಗವು ಶ್ರೀ ಪತಂಜಲಿ ಮಹರ್ಷಿಗಳಿಂದ ರಚಿತವಾದ ೧೯೬ ಯೋಗಸೂತ್ರಗಳ ಆಧಾರದಿಂದ ರೂಪಿತವಾಗಿದೆ. ಈ ಸೂತ್ರಗಳಲ್ಲಿ ನಾಲ್ಕು ಪಾದಗಳಿವೆ. ಅವುಗಳೇ ಸಮಾಧಿ ಪಾದ (೫೧ ಸೂತ್ರಗಳು), ಸಾಧನಾ ಪಾದ (೫೫ ಸೂತ್ರಗಳು), ವಿಭೂತಿ ಪಾದ (೫೬ ಸೂತ್ರಗಳು) ಮತ್ತು ಕೈವಲ್ಯ ಪಾದ (೩೪ ಸೂತ್ರಗಳು).

ಅಷ್ಟಾಂಗಯೋಗ ಎಂದರೆ ಎಂಟು ಅಂಗಗಳಿಂದ (ಅಥವಾ ಮೆಟ್ಟಿಲುಗಳಿಂದ) ಕೂಡಿದ ಯೋಗಮಾರ್ಗ. ಆ ಎಂಟು ಅಂಗಗಳೇ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಹಾಗೂ ಸಮಾಧಿ. ಧ್ಯಾತೃ, ಧ್ಯಾನ ಹಾಗೂ ಧ್ಯೇಯ ಎಂಬ ಮೂರು ಭಾಗಗಳಿವೆ. ಧ್ಯಾತೃ ಎಂದರೆ ಧ್ಯಾನ ಮಾಡುವ ಸಾಧಕ (ಅಥವಾ ಸಾಧಕಿ), ಧ್ಯಾನ ಎನ್ನುವುದು ಏಳನೆಯ ಅಂಗವಾದದ್ದು ಮತ್ತು ಧ್ಯೇಯ ಎಂದರೆ ಸಾಧಿಸಬೇಕಾದ ಗುರಿ. ಇಲ್ಲಿ ಗುರಿಯೇ ಸಮಾಧಿ: ಧ್ಯಾತೃ, ಧ್ಯಾನ ಹಾಗೂ ಧ್ಯೇಯಗಳ ಒಂದಾಗುವಿಕೆ. ಇಲ್ಲಿ ಬಂದಾಗ ಸಮಾಧಿ ಸ್ಥಿತಿ ಎಂದರೆ ನಿಜವಾದ ಸಮಾಧಾನ (ಶಾಂತಿ, ಆನಂದ) ನೀಡುವ ಸ್ಥಿತಿ. ಈ ಸ್ಥಿತಿಯನ್ನು ಸಾಧಿಸುವುದಕ್ಕೆ ಮೊದಲ ಆರು ಅಂಗಗಳನ್ನು ಸಾಧಿಸಿ ಏಳನೆಯ ಅಂಗವಾದ ಧ್ಯಾನದ ಮೂಲಕ ಎಂಟನೆಯದಾದ ಸಮಾಧಿಸ್ಥಿತಿಯನ್ನು ಸಾಧಿಸಬೇಕು. ಅದಕ್ಕೇ ಅನೇಕರ ಅನುಭವಕ್ಕೆ ಬಂದಿರುವ ವಿಷಯವೆಂದರೆ ಧ್ಯಾನ ಮಾಡುವುದು ಎಷ್ಟು ಕಷ್ಟವೆನ್ನುವುದು.

ಅಷ್ಟಾಂಗಯೋಗದ ಮೊದಲನೆಯ ಅಂಗವಾದ "ಯಮ"ದಲ್ಲಿ ಐದು

# ಯೋಗ ಎಂದರೇನು...

ವಿಭಾಗಗಳಿವೆ. ಅವುಗಳೇ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹ. ಈ ಐದನ್ನೂ ಮನಸ್ಸು, ಮಾತು, ಕ್ರಿಯೆಗಳ ಮೂಲಕ ಪಾಲಿಸಬೇಕು. ಅಸ್ತೇಯವೆಂದರೆ ಪರರ ವಸ್ತುಗಳನ್ನು ಕದಿಯದಿರುವುದು. ಬ್ರಹ್ಮಚರ್ಯವೆಂದರೆ ಗೃಹಸ್ಥಜೀವನದಲ್ಲಿ ಇಂದ್ರಿಯ ನಿಯಂತ್ರಣ ಹಾಗೂ ಅಪರಿಗ್ರಹ, ಅಂದರೆ ಪರರ ವಸ್ತುಗಳನ್ನು ಆಶಿಸದಿರುವುದು ಅಥವಾ ಸ್ವೀಕರಿಸದಿರುವುದು. ಎರಡನೆಯ ಅಂಗವಾದ "ನಿಯಮ"ದಲ್ಲಿಯೂ ಐದು ಅಂಗಗಳಿವೆ. ಅವುಗಳೇ ಶೌಚ (ಶುದ್ಧತೆ), ಸಂತೋಷ (ತೃಪ್ತಿ), ತಪಸ್ಸು (ವ್ರತಸಾಧನೆ), ಸ್ವಾಧ್ಯಾಯ (ಶಾಸ್ತ್ರಗಳ ಅಧ್ಯಯನ) ಹಾಗೂ ಈಶ್ವರ ಪ್ರಣಿಧಾನ (ಪರಮಾತ್ಮನಲ್ಲಿ ಶರಣಾಗತಿ). ಯಮ ಹಾಗೂ




ನಿಯಮಗಳು ಎಲ್ಲ ರೀತಿಯಲ್ಲಿಯೂ ಸಾಧಕ ಹಾಗೂ ಸಾಧಕಿಯರನ್ನು ಯೋಗಮಾರ್ಗದ ಮುಂದಿನ ಭಾಗಗಳಿಗೆ ಸಿದ್ಧಗೊಳಿಸುತ್ತವೆ. ಮೂರನೆಯ ಅಂಗವಾದ 'ಆಸನ'ವನ್ನು ಯೋಗಾಸನ ಎಂದು ಕರೆಯಲಾಗಿದೆ. ಅನೇಕ ರೀತಿಯ ಯೋಗಾಸನಗಳಿವೆ. ಇದರಲ್ಲಿ ಮುಖ್ಯವಾದ ಅಂಶವೆಂದರೆ ಆಸನದಲ್ಲಿ ಸ್ಥಿರತೆ ಹಾಗೂ ಸುಖ, ಎಂದರೆ (ತೀವ್ರವಾದ) ನೋವುಗಳಿಲ್ಲದಿರುವುದು. ನಾಲ್ಕನೆಯ ಅಂಗವೇ "ಪ್ರಾಣಾಯಾಮ" ಎಂದರೆ ಪ್ರಾಣಶಕ್ತಿಯ ಆಯಾಮ. ಇದರಲ್ಲಿಯೂ ಅನೇಕ ರೀತಿಗಳಿವೆ. ಐದನೆಯ ಅಂಗವೇ "ಪ್ರತ್ಯಾಹಾರ". ಈ ಅಂಗದಲ್ಲಿ ಸಾಧಕ (ಅಥವಾ ಸಾಧಕಿಯು) ಮನಸ್ಸನ್ನು ಇಂದ್ರಿಯಗಳ ಸಂಬಂಧದಿಂದ ಹಿಂತೆಗೆದು ಒಳಧ್ಯೇಯದ ಮೇಲೆ ಏಕಾಗ್ರವಾಗಿಡುವುದು. ಆರನೆಯ ಅಂಗವೇ "ಧಾರಣಾ" ಎಂದರೆ ಒಳಮುಖಮಾಡಿದ ಮನಸ್ಸನ್ನು ಶುಭವಾದ ಒಳಧ್ಯೇಯ ವಸ್ತುವಿನಲ್ಲಿ ಧಾರಣೆ ಮಾಡುವುದು. ಹಾಗೆ ಧಾರಣೆ ಮಾಡಿದ ಮನಸ್ಸು ನಿರಂತರವಾಗಿ ಶುಭವಾದ ಒಳವಸ್ತುವಿನಲ್ಲಿ ಹರಿಯುವಂತೆ ಇರುವುದೇ ಧ್ಯಾನ. ನಂತರ ಸಮಾಧಿ ಸ್ಥಿತಿ. ಇದು ಅಷ್ಟಾಂಗಯೋಗದ ಸ್ಥೂಲ ಪರಿಚಯ.

**ಸಾರಾಂಶ**

ಯೋಗವು ಜೀವನದಲ್ಲಿ ಏನೇ ಉನ್ನತವಾದ ಧ್ಯೇಯವನ್ನು ಸಾಧಿಸಬೇಕಾದರೆ ಸಹಾಯಕ. ಆದರೆ ಜೀವನದ ಪರಮಧ್ಯೇಯವಾದ ಎಲ್ಲೆಡೆ ಯಾವಾಗಲೂ ಇರುವ ಪರಮಾತ್ಮ ಶಕ್ತಿಯ ದರ್ಶನಾನುಭವವನ್ನು ಸಾಧಿಸಬೇಕಾದರೆ ಯೋಗಮಾರ್ಗದಲ್ಲಿ ಸಾಧಿಸಬೇಕು. ಜೀವನದಲ್ಲಿ ಬರುವ ಮೇಲೆ ಹೇಳಿದ ಆಳವಾದ ಪ್ರಶ್ನೆಗಳಿಗೆ ಯೋಗಮಾರ್ಗದಲ್ಲಿ ಸಂಚರಿಸಿದ ಅನೇಕ ಋಷಿಗಳು ಸಮಾಧಾನ (ಶಾಂತಿ, ಆನಂದ) ನೀಡುವ ಹಾಗೂ ಅನುಭವವೇದ್ಯ ಉತ್ತರಗಳನ್ನು ಕಂಡುಕೊಡಿದ್ದಾರೆ. ಅಷ್ಟೇ ಅಲ್ಲದೇ ಯೋಗಮಾರ್ಗದಲ್ಲಿ ಗುರಿಯನ್ನು ಸಾಧಿಸಿದಂತಹ ಗುರುಗಳ ಆಸರೆ ಹಾಗೂ ಮಾರ್ಗದರ್ಶನದಿಂದ, ಶ್ರದ್ಧಾಭಕ್ತಿಪೂರ್ವಕ ಸಾಧನೆಯಿಂದ, ಸಾಧಕ-ಸಾಧಕಿಯರು ಯಾವ ಕಾಲದಲ್ಲೇ ಹಾಗೂ ಯಾವ ದೇಶದಲ್ಲಿಯೇ ಆಗಲಿ ಜೀವನದ ಪರಮಧ್ಯೇಯವನ್ನು ಸಾಧಿಸಬಹುದು. ಇನ್ನೊಂದು ಮುಖ್ಯವಾದ ವಿಷಯವೆಂದರೆ ಅಷ್ಟಾಂಗ ಯೋಗದ ಎಲ್ಲಾ ಅಂಗಗಳು ಮನುಷ್ಯನ ಜೀವನವನ್ನು ಉನ್ನತ ಮಟ್ಟಕ್ಕೆ ಕರೆದೊಯ್ಯುತ್ತವೆ. ಕರ್ನಾಟಕದ ಮಹಾಯೋಗಿಯೂ ಹಾಗೂ ಜ್ಞಾನಿಯೂ ಆದ ಶ್ರೀರಂಗ ಸದ್ಗುರುವಿನ ಮಾತಿನಲ್ಲಿ ಅಷ್ಟಾಂಗಯೋಗದ ಕೊಡುಗೆಯ ಬಗ್ಗೆ ಈ ರೀತಿಯದೆ. "ಭಾರತೀಯರ ಆಹಾರ, ವಿಹಾರ, ಆಚಾರ-ವಿಚಾರ, ಉಡಿಗೆ-ತೊಡಿಗೆ, ನಡೆ-ನುಡಿ, ಪುಣ್ಯ-ಪಾಪ ವಿವೇಚನೆ, ವಿದ್ಯೆ, ಸಾಹಿತ್ಯ, ಸಂಗೀತ ಮುಂತಾದ ಕಲೆಗಳು, ರಾಜನೀತಿ, ಕರ್ಮ ಮೀಮಾಂಸೆ, ಸಂಸ್ಕಾರಗಳು ಮುಂತಾದುವುಗಳೆಲ್ಲವೂ ಅಷ್ಟಾಂಗಯೋಗದಿಂದ ಹಾಸುಹೊಕ್ಕಾಗಿ ಹೆಣೆಯಲ್ಪಟ್ಟಿವೆ."

# ಭಾವಪೂರ್ಣ ಶ್ರದ್ಧಾಂಜಲಿ



ಮಾಸ್ಟರ್ ಹಿರಣ್ಣಯ್ಯ
(ಫೆಬ್ರುವರಿ ೧೫, ೧೯೩೪ – ಮೇ ೦೨, ೨೦೧೯)




ಗಿರೀಶ್ ಕಾರ್ನಾಡ್
(ಮೇ ೧೯, ೧೯೩೮ – ಜೂನ್ ೧೦, ೨೦೧೯)



# ವೀರ ಯೋಧರಿಗಾಗಿ ವಿಜಯ ಪ್ರಕಾಶ್ ವಿಜಯೋತ್ಸವ





**ಅನಿಲ್ ಭಾರಧ್ವಾಜ್**

ಮೇ ೫, ೨೦೧೯, ನ್ಯೂ ಜೆರ್ಸಿ : ಈಶಾನ್ಯ ಅಮೆರಿಕಾದ ಎಲ್ಲಾ ಕನ್ನಡ ಸಂಘಗಳು ಕೈಗೂಡಿಸಿ, ಕನ್ನಡ ಮತ್ತು ಕನ್ನಡ ಸಂಗೀತ ಪ್ರೇಮಿಗಳಿಗಾಗಿ, ಹೆಸರಾಂತ ಹಿನ್ನೆಲೆ ಗಾಯಕರಾದ ವಿಜಯ ಪ್ರಕಾಶ್ ರವರು ಮತ್ತು ಅವರ ತಂಡದವರಿಂದ ಸಂಗೀತ ಸಂಜೆ ಕಾರ್ಯಕ್ರಮ ಏರ್ಪಡಿಸಿದ್ದವು.

ಈ ರಸಸಂಜೆಯ ವಿಶೇಷವೆಂದರೆ, ಇದು ಭಾರತೀಯ ಸೇನೆಯ ವೀರ ಯೋಧರ ಸಹಾಯಾರ್ಥವಾಗಿ ನಡೆಸಲ್ಪಟ್ಟಿತ್ತು. ಸ್ಥಳೀಯ ಹೈಟ್ಸ್ ಟೌನ್ ಪ್ರೌಢಶಾಲೆಯಲ್ಲಿ ಈ ಕಾರ್ಯಕ್ರಮ ಜರುಗಿತು. ತಾನಿಷ್ ಮೀಡಿಯಾ ದವರು ಈ ಅಮೇರಿಕಾ ಪ್ರವಾಸ ಆಯೋಜಿಸಿದ್ದರು.

ವಿಜಯ ಪ್ರಕಾಶ್‌ರ ಜನಪ್ರಿಯತೆಯ ಸಾಕ್ಷಿಯೇನೋ ಎಂಬಂತೆ, ರಂಗಮಂದಿರದ ಪ್ರತಿಯೊಂದು ಕುರ್ಚಿಯೂ ಪ್ರೇಕ್ಷಕರಿಂದ ಆಗಲೇ ಮುಂಗಡ ಹಣ ಕೊಟ್ಟು ಕಾಯ್ದಿರಿಸಿಕೊಳ್ಳಲ್ಪಟ್ಟಿತ್ತು. ಟಿಕೆಟ್ ಗಳು ಮೂರ್‍ನಾಲ್ಕು ದರ್ಜೆಗಳಲ್ಲಿ ಪಡೆಯಬಹುದಾಗಿತ್ತು. ಕಾರ್ಯಕ್ರಮದ ಸ್ವಯಂಸೇವಕ ಕಾರ್ಯಕರ್ತರು ಬಹಳ ಅಚ್ಚುಕಟ್ಟಾಗಿ, ವಿವಿಧ ಬಣ್ಣದ ಬ್ಯಾಂಡ್ ಮೂಲಕ ಜನಸ್ತೋಮ ನಿಯಂತ್ರಿಸಿದರು. ರಸಸಂಜೆ ಶುರುವಾಗುವ ಒಂದೆರಡು ತಾಸಿಗೂ ಮುಂಚೆಯೇ ಜನರೆಲ್ಲಾ ನೆರೆದು, ಹಬ್ಬದ ವಾತಾವರಣ ಹುಟ್ಟಿಸಿದ್ದರು. ತಾರೆಗಳ ಆಗಮನ ನಿರೀಕ್ಷಿಸುತ್ತಿದ್ದವರಿಗೆ, ಲಘು ಉಪಹಾರದ ಸಣ್ಣ ಅಂಗಡಿಗಳನ್ನು ಶಾಲೆಯ ಉಪಹಾರ ಗೃಹದಲ್ಲಿ ತೆರೆದಿದ್ದರು.

ವಿಜಯ ಪ್ರಕಾಶ್ ಅವರೊಂದಿಗೆ ಬಹುಮುಖ ಪ್ರತಿಭೆಯುಳ್ಳ ಹಲವಾರು ಕಲಾವಿದರು ಅವರ ಪ್ರವಾಸಿ ತಂಡದಲ್ಲಿ ಸೇರಿದ್ದರು. ಹಿನ್ನೆಲೆ ಗಾಯನದಲಿ ್ಲ ಶ್ರೀಮತಿ ಅನುರಾಧಾ ಭಟ್ ಹಾಗು ಶಶಿಕಲಾ ಸುನಿಲ್, ಡ್ರಮ್ಸ್ ನಲ್ಲಿ ಅರುಣ್ ಕುಮಾರ್, ಕೀ ಬೋರ್ಡ್ ನಲ್ಲಿ ಆಕಾಶ್, ಬೃತುವ ಗಿಟಾರ್ ಮೇಲೆ, ಸಂದೀಪ್ ರಿಂದ ಕೊಳಲು ಮತ್ತು ಕೊಂಗಾ ಡ್ರಮ್ಸ್ ಮೇಲೆ ಪ್ರವೀಣ್. ಖುಷಿ ತರುವ ವಿಚಾರವೆಂದರೆ ಈ ತಂಡದ ಬಹುತೇಕ ಸದಸ್ಯರು ಸ್ವತಃ ಅವರುಗಳೇ ಜಗತ್ಪ್ರಸಿದ್ಧ ಕಲಾವಿದರುಗಳು. ಅವರರೆಲ್ಲರ ಕಲಾ ಕೌಶಲವನ್ನು ಒಂದೇ ವೇದಿಕೆಯ ಮೇಲೆ ನೋಡಿ, ಕೇಳಿ ಆನಂದಿ ಸುವ ಸದವಕಾಶ ಅಂದು ನ್ಯೂ ಜೆರ್ಸಿ ಕನ್ನಡಿಗರಿಗೆ ಒದಗಿಬಂದಿತ್ತು.

ಅನುರಾಧಾ ಭಟ್ **‘ಕೇಳಿಸದೇ ಕಲ್ಲು ಕಲ್ಲಿನಲು ಕನ್ನಡ ನುಡಿ’** ಹಾಡಿನಿಂದ ಸಂಜೆಯನ್ನು ಆರಂಭಿಸಿದರು. ನಂತರ ಶಶಿಕಲಾ ಅವರು ಭಟ್ ರೊಂದಿಗೆ ಕೂಡಿ ಜನಪ್ರಿಯ ಯುಗಳ ಗೀತೆ ‘ತೆರೆದಿದೆ ಮನೆ ಓ ಬಾ ಅತಿಥಿ’ ಬಹಳ ಇಂಪಾಗಿ ಪ್ರಸ್ತುತಪಡಿಸಿದರು. ಏತನ್ಮಧ್ಯೆ, ವಿಜಯ ಪ್ರಕಾಶ್ ಅವರು ವೇದಿಕೆ ಮೇಲೆ ಬರುವುದನ್ನು ಸಭಿಕರು ಹಾತೊರೆ–ಯುತ್ತಿದ್ದರು. ಕೊನೆಗೂ ಭರ್ಜರಿ ವಾದ್ಯ ಮೇಳಗಳೊಂದಿಗೆ ವಿಜಯ್ ಪ್ರಕಾಶ್ ರಂಗ ಪ್ರವೇಶ ಮಾಡಿದರು. ತಮ್ಮ ಹೆಸರುವಾಸಿಯಾದ ‘ಬೊಂಬೆ ಹೇಳುತ್ತೈತೆ’ ಹಾಡಿನಿಂದ ಅವರ ಗಾನಗೋಷ್ಠಿ ಶುರುವಾಯಿತು. ವಿಜಯ ಪ್ರಕಾಶ್ ಪ್ರೇಕ್ಷಕರೊಂದಿಗೆ ಅಚ್ಚ ಕನ್ನಡದಲ್ಲಿ ಸಂವಾದಿಸುತ್ತಾ, ತಮ್ಮ ಹಾಡುಗಳನ್ನು ಒಂದರ ನಂತರ ಇನ್ನೊಂದು ಹಾಡುತಿದ್ದಾಗ ಎಲ್ಲರೂ ಸಂತೋಷದಿಂದ ಕರತಾಡನ ಮಾಡುತ್ತಿದ್ದರು.

# ವೀರ ಯೋಧರಿಗಾಗಿ ವಿಜಯ ಪ್ರಕಾಶ್

ಕಾರ್ಯಕ್ರಮದ ಒಂದು ತುಂಡಿನಲ್ಲಿ ಡಾ॥ ರಾಜ್ ಕುಮಾರ್ ಅವರ ಹೆಸರಾಂತ ಹಾಡಿನಿಂದ ಆರಂಭಿಸಿ ರವಿಚಂದ್ರನ್ ರ ಕಾಲದ ತನಕ ಎಲ್ಲಾ ಪ್ರಖ್ಯಾತ ನಾಯಕ–ನಾಯಕಿಯರ ಹಾಡಿನ ತುಣುಕುಗಳನ್ನು ತಂಡದವರು ಹಾಡಿದಾಗ, ಸಭಿಕರು ಅವರೊಂದಿಗೆ ಹಾಡಿ, ಚಪ್ಪಾಳೆ ತಟ್ಟಿ ಆನಂದಿಸಿದರು.



ಮತ್ತೊಂದು ವಿಶೇಷವೆಂದರೆ, ಅವರ ಹಾಡುಗಳ ವೃಂದಗಾನದ ಭಾಗಗಳಿಗೆ ನ್ಯೂ ಜೆರ್ಸಿಯ ಸಿಂಹಾದ್ರಿಯವರ ತಂಡ ಬೆಂಬಲ ನೀಡಿತು. 'ಬೆಳಗೆದ್ದು ಯಾರ ಮುಖವ ನಾನು ನೋಡದೆ', 'ಓಂ ಶಿವೋಹಂ', 'ಅಲ್ಲಾಡ್ಸು ಅಲ್ಲಾಡ್ಸು' ಮತ್ತು 'ನಂದನಂದನ ನೀನು ಶ್ರೀಕೃಷ್ಣ' ಹಾಡುಗಳಿಗೆ ಉತ್ತಮ ಮೇಳಗಾನ ಮಾಡಿ, ವಿಜಯ ಪ್ರಕಾಶ್ ಅವರ ಮತ್ತು ತಂಡದ ಮೆಚ್ಚುಗೆ ಪಡೆದರು.

ರಸಸಂಜೆಯನ್ನು ಅವರ ಆಸ್ಕರ್ ವಿಜೇತ ಹಾಡಾದ 'ಜಯ್ ಹೋ' ನಿಂದ ವಿಜಯ ಪ್ರಕಾಶ್ ಮುಗಿಸಿದರು. ಆದರೆ ನೆರೆದಿದ್ದ ಅಭಿಮಾನಿಗಳು ಆ ಸಂಜೆಯನ್ನು ಮುಗಿಯುವುದಕ್ಕೆ ಬಿಡಲು ತಯಾರಿರಲಿಲ್ಲ. ಶೀಘ್ರದಲ್ಲೇ ವಾಪಸಾಗಿ ಅಭಿಮಾನಿಗಳ ಮನತಣಿಸುವ ವಚನವಿತ್ತು, ಸಭಿಕರಿಗೆ ವಿದಾಯ ಹೇಳಿದರು.



ಅಮೇರಿಕದ ಭಾರತೀಯ ಸಮಾಜಕ್ಕೆ

# ಶ್ರೀಕೃಷ್ಣ ವೃಂದಾವನದ

ಕೊಡುಗೆ



# ಕೃಷ್ಣ ಬೃಂದಾವನ



**ಶ್ರೀವಿದ್ಯಾ ಪ್ರಶಾಂತ್**

ಪರಮಾತ್ಮನು ಸರ್ವಾಂತರ್ಯಾಮಿ. ಈ ಭೂಮಿ ಎಂಬ ನಾಟಕರಂಗದ ಸೂತ್ರಧಾರಿ. ನಾವು ಇದರ ಪಾತ್ರಧಾರಿಗಳು ಅಷ್ಟೇ. ಮನುಷ್ಯ ಜೀವನದ ಅಂತಿಮ ನಿಲುವು, ಕನಕದಾಸರು ಹೇಳಿದಂತೆ: "ಎಲ್ಲಾರು ಮಾಡುವುದು ಹೊಟ್ಟೆಗಾಗಿ..ಗೇಣು ಬಟ್ಟೆಗಾಗಿ..ತುತ್ತು ಹಿಟ್ಟಿಗಾಗಿ". ಪ್ರತಿಯೊಬ್ಬರೂ ತಮ್ಮ ಜೀವನೋಪಾಯಕ್ಕಾಗಿ ಉತ್ತಮ ವಿದ್ಯೆ, ನಂತರ ಉನ್ನತ ಉದ್ಯೋಗ, ತದನಂತರ ಸುಂದರ ಬದುಕನ್ನು ಕಟ್ಟಿಕೊಳ್ಳುವ ಕನಸನ್ನು ಹೊಂದಿರುತ್ತಾರೆ. ಇದಕ್ಕಾಗಿ ಅದೆಷ್ಟೋ ಮೈಲಿ ದೂರದ ತಾಯ್ನಾಡನ್ನು ತೊರೆದು ಬಂದು ವಿದೇಶಗಳಲ್ಲಿ ಸಂಸಾರ ನಡೆಸುತ್ತಾರೆ. ಆದರೆ ತಾವು ಬೆಳೆದು ಬಂದಂತಹ ವಾತಾವರಣ, ಕಲಿತ ಜೀವನ ಮೌಲ್ಯಗಳು, ಆಚಾರ-ವಿಚಾರ ಹಾಗೂ ಪದ್ಧತಿಗಳು, ಎಲ್ಲೇ ಇದ್ದರೂ ಹೇಗೇ ಇದ್ದರೂ ಬದಲಿಸಿಕೊಳ್ಳುವುದು ಅಷ್ಟು ಸುಲಭವಿಲ್ಲ. ಅವೇ ನಮ್ಮ ಜೀವನದ ಆಧಾರ ಸ್ತಂಭಗಳು, ಇರುವಿಕೆಗೆ ಭದ್ರ ಬುನಾದಿಗಳು.

ಆ ಪ್ರಕಾರವಾಗಿ ಇಂದು ಅದೆಷ್ಟೋ ಭಾರತೀಯರು ಅಮೇರಿಕಾದ ನ್ಯೂಜೆರ್ಸಿ ಪ್ರಾಂತ್ಯದಲ್ಲಿ ಬಂದು ನೆಲಸಿದ್ದಾರೆ. ಆದರೆ ನಮ್ಮ ಹಿಂದೂ ಸಂಸ್ಕೃತಿ-ಪದ್ಧತಿಗಳನ್ನು ಮುಂದಿನ ಪೀಳಿಗೆಗೆ ಸಾಗಿಸುವಲ್ಲಿ ಪೂರಕವಾಗಿ ಸಮಾಜಕ್ಕೆ ವರದಾಯಕವಾಗಿ ಎಡಿಸನ್ ನಗರಿಯಲ್ಲಿ ನೆಲೆನಿಂತಿರುವ ಶ್ರೀ ಕೃಷ್ಣ ವೃಂದಾವನದ ಕೊಡುಗೆ ಅಪಾರ.ಇದು ಪರಮಪೂಜ್ಯ ಶ್ರೀಪಾದರಾದ ಉಡುಪಿಯ ಪುತ್ತಿಗೆ ಮಠಾಧೀಶ ಶ್ರೀ ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿಯವರ ಸಾಧನೆ. ಅವರ ಧರ್ಮ ಸಂಸ್ಥಾಪನೆಯ ಪರಿಶ್ರಮದ ಫಲವೇ ಈ ವಿಶ್ವವಿಖ್ಯಾತ- "ಶ್ರೀ ಕೃಷ್ಣ ವೃಂದಾವನ".

ನ್ಯೂಜೆರ್ಸಿಯ ಶ್ರೀ ಕೃಷ್ಣ ವೃಂದಾವನ ಚಾಲನೆಗೊಂಡದ್ದು೨೦೦೨ ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ. ಇದರಿಂದ ಸಾವಿರಾರು ಮೈಲಿ ದೂರ, ಉದ್ಯೋಗವನ್ನರಸಿಕೊಂಡು ಬಂದು ಇಲ್ಲೇ ನೆಲೆನಿಂತ ಹಿಂದೂ ಸಮಾಜಕ್ಕೆ ಸ್ವರ್ಗವೇ ಸಿಕ್ಕಿದಂತಾಯಿತು. ಪ್ರತೀ ಹಬ್ಬ-ಹರಿದಿನಗಳು, ಪೂಜೆ-ಪ್ರವಚನಗಳು, ರುಚಿಕಟ್ಟಾದ ಊಟ- ಮಾತೃಭಾಷೆ-ನಂಬಿದ ಭಗವಂತ ಹಾಗೂ ಗುರುಗಳ ಸಾನ್ನಿಧ್ಯದಿಂದ ದೂರವಿದ್ದೇವೆ ಎಂದು ನೊಂದಿಕೊಳ್ಳುತ್ತಿದ್ದ ಭಾರತೀಯ ಜನ ಸಮುದಾಯಕ್ಕೆ ಮತ್ತೆ ಎಲ್ಲವೂ ಕೈ ಅಳತೆಯಲ್ಲೇ ಸಿಗುವಂತಾಯಿತು.

ಶ್ರೀ ಮಠದಲ್ಲಿ ನಡೆಯುವ ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಪ್ರತಿನಿತ್ಯ ನೂರಾರು ಭಕ್ತರನ್ನು ಆಕರ್ಷಿಸುತ್ತದೆ. ಬೆಳಗ್ಗಿನ ಮಂಗಳಾಷ್ಟಕದಿಂದ ರಾತ್ರಿಯ ಕನ್ನಡ ಜೋಗುಳ ಹಾಡಿನ ತನಕದ ನಿತ್ಯ ಸೇವೆಗಳು ನೆರೆದ ಸಮುದಾಯವನ್ನು ಕೃಷ್ಣ ಭಕ್ತಿಯಲ್ಲಿ ಮೈ ಮರೆಯುವಂತೆ ಮಾಡುತ್ತದೆ. ಸೋಮವಾರದ ರುದ್ರ-ಮಂಗಳವಾರದ ಗೀತಾ ಪ್ರವಚನ-ಬುಧವಾರದ ವಿಷ್ಣುಸಹಸ್ರನಾಮ, ಗುರುವಾರದ ರಾಯರ ಸ್ತೋತ್ರ, ಶುಕ್ರವಾರದ ಲಕ್ಷ್ಮೀ ಪೂಜೆ, ಶನಿವಾರದ ಪಂಚಾಮೃತಾಭಿಷೇಕ ಹಾಗೂ ಭಾನುವಾರದ ನಾದೋಪಾಸನೆ ಇತ್ಯಾದಿ..ಅಷ್ಟೇ ಅಲ್ಲದೆ ಪ್ರತೀ ಅಮಾವಾಸ್ಯೆಯಂದು ನಡೆಯುವ  ದುರ್ಗಾನಮಸ್ಕಾರ ಪೂಜೆ ಹಾಗೂ ಪ್ರತೀ ಹುಣ್ಣಿಮೆಯಂದು ನಡೆಯುವ ಸಾಮೂಹಿಕ ಸತ್ಯನಾರಾಯಣ ಪೂಜೆಯು ಎಲ್ಲಾ ಪ್ರಾಂತ್ಯದ ಭಕ್ತರು ಬಂದು ತನ್ಮಯತೆಯಿಂದ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತದೆ.

ಭಾರತವು ಕಲೆ ಮತ್ತು ಸಂಸ್ಕೃತಿಗೆ ಹೆಸರಾದ ದೇಶ. ಅಲ್ಲಿ ಹುಟ್ಟಿ-ಬೆಳೆದು




*ಮಠದ ಸಮಾಜಮುಖಿ ಕಾರ್ಯಕ್ರಮಗಳು*

# ಕೃಷ್ಣ ಬೃಂದಾವನ

ವಿದ್ಯಾಭ್ಯಾಸದೊಂದಿಗೆ ಸಭ್ಯತೆ ಹಾಗೂ ಸಂಸ್ಕೃತಿಯನ್ನು ಪಡೆದ ನಾವು–ನಮ್ಮ ಮುಂದಿನ ಪೀಳಿಗೆಗೂ ಇವೆಲ್ಲವನ್ನು ಕಲಿಸುವಂತಹ ಹಿರಿದಾದ ಹೊಣೆಯನ್ನು ಹೊಂದಿದ್ದೇವೆ. ಆ ನಿಟ್ಟಿನಲ್ಲಿ ಪ್ರತೀ ಜವಾಬ್ಧಾರಿಯುತ ತಂದೆ–ತಾಯಿ, ತಮ್ಮ ಮಕ್ಕಳಿಗೆ ಭಾರತೀಯ ಪರಂಪರೆಯ ಜೀವನ ಪದ್ಧತಿಯನ್ನು ಅಳವಡಿಸಿ ಕೊಳ್ಳುವಂತೆ ಸದಾ ಪ್ರೇರೇಪಿಸುತ್ತಾರೆ. ಇಲ್ಲಿ ಬೆಳೆಯುತ್ತಿರುವಂತಹ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಧ್ಯೋತಕವಾದ ಶಾಸ್ತ್ರೀಯ ಸಂಗೀತ– ಭರತ ನಾಟ್ಯ– ಪಕ್ಕವಾದ್ಯಗಳ ಶಿಕ್ಷಣವನ್ನಿತ್ತು ನಮ್ಮ ಪರಂಪರೆಯನ್ನು ಮುಂದುವರಿಸುವಂತೆ ಉತ್ತೇಜಿಸುತ್ತಾರೆ. ಆದರೆ ತಾವು ಕಲಿತ ವಿದ್ಯೆಯ ಪ್ರತಿಭೆಯನ್ನು ಪ್ರದರ್ಶಿಸಿ ಮಕ್ಕಳಲ್ಲಿ ಆತ್ಮ ವಿಶ್ವಾಸವನ್ನು ಜಾಗೃತಗೊಳಿಸುವಲ್ಲಿ ಶ್ರೀ ಕೃಷ್ಣವೃಂದಾವನವು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ ಎಂದರೆ ತಪ್ಪಾಗಲಾರದು.  ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಹಬ್ಬ–ಹರಿದಿನಗಳು ಅವುಗಳ ಆಚರಣಾ ಪದ್ಧತಿ ಹಾಗೂ ಮನೋರಂಜನಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಇಂದಿನ ಹಾಗೂ ಮುಂದಿನ ಪೀಳಿಗೆಗೆ ತಮ್ಮ ಜೀವನದ ಮೌಲ್ಯಗಳನ್ನು ತಿಳಿಯಪಡಿಸುವಲ್ಲಿ ತುಂಬಾ ಸಹಕಾರಿಯಾಗಿದೆ. ಉದಾಹರಣೆಗೆ: ಜನವರಿ ತಿಂಗಳಲ್ಲಿ ನಡೆಯುವ ಪುರಂದರ ದಾಸರ ಆರಾಧನೆ– ಈ ಸಂದರ್ಭದಲ್ಲಿ ಕರ್ನಾಟಕ ಸಂಗೀತ ಹಾಗೂ ಭಕ್ತಿಗೀತೆಗಳ ಸಂಗೀತೋತ್ಸವವನ್ನು ಆಯೋಜಿಸಲಾಗುವುದು. ಇದರಿಂದ ನಮ್ಮ ಕರ್ನಾಟಕ ಸಂಗೀತದ ಪಾಮುಖ್ಯತೆ ಹಾಗೂ ಅದರ ಬೆಳವಣಿಗೆ ಮತ್ತು ಪ್ರತಿಭಾವಂತ ಗಾಯಕ ಗಾಯಕಿಯರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶವನ್ನು ಪೂರೈಸಿದಂತೆ ಹೀಗೆಯೇ ಮಾರ್ಚ್ ತಿಂಗಳಲ್ಲಿ ನಡೆಯುವ ಶಿವರಾತ್ರಿ ಹಬ್ಬದ ಪ್ರಯುಕ್ತ ನಡೆಯುವ ನೃತ್ಯೋತ್ಸವ ಕಾರ್ಯಕ್ರಮವು ಇಂದಿನ ಯುವ ಜನಾಂಗಕ್ಕೆ ನಮ್ಮ ಕಲೆ ಹಾಗೂ ಸಂಸ್ಕೃತಿಯ ಬಗ್ಗೆ ಮತ್ತಷ್ಟು ಧನ್ಯತಾ ಭಾವವನ್ನು ಹಾಗೂ ಮಾನ್ಯತೆಯನ್ನು ಗುರುತು ಪಡಿಸಿ ಹೇಗೆ ಇವು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ ಎಂಬುದನ್ನು ತಿಳಿಯಪಡಿಸಲು ಒಂದು ಅವಕಾಶ ಕಲ್ಪಿಸಿ ಕೊಟ್ಟಂತಾಗುತ್ತದೆ. ಇಷ್ಟೇ ಅಲ್ಲದೆ, ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಆರಾಧನೆ, ಶ್ರೀ ಕೃಷ್ಣ ಜನ್ಮಾಷ್ಟಮಿಯ ಸಂದರ್ಭದಲ್ಲಿ ನಡೆಯುವ ಮಕ್ಕಳ ಕೃಷ್ಣ ವೇಷ ಸ್ಪರ್ಧೆ, ಗಣೇಶ ಚತುರ್ಥಿ, ನವರಾತ್ರಿ ಸಂಧರ್ಭದಲ್ಲಿ ಪ್ರತಿದಿನ ನಡೆಯುವ ದುರ್ಗಾನಮಸ್ಕಾರ ಪೂಜೆ ಹಾಗೂ ದೀಪಾವಳಿ ಹೀಗೆ ಎಲ್ಲಾ ಹಬ್ಬಗಳನ್ನು ನಮ್ಮ ಸ್ವದೇಶದಲ್ಲಿ ನಡೆದಂತೆ ಬಹು ಶಾಸ್ತ್ರೋಕ್ತವಾಗಿ ಆಚರಿಸಲಾಗುತ್ತದೆ. ಇಂತಹ ಅಚ್ಚುಕಟ್ಟಾದ ಆಚರಣೆಗಳಿಂದ ನಮ್ಮ ಯುವಪೀಳಿಗೆಗೆ ಎಲ್ಲವನ್ನೂ ತೋರಿಸಿ ಮನದಟ್ಟಾಗುವಂತೆ ಕಲಿಸಲು ತುಂಬಾ ಒಳ್ಳೆ ಅವಕಾಶ.



ದೇವಾಲಯಗಳು ಹಿಂದೂ ಸಮಾಜದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಜನಾಂಗದಲ್ಲಿ ಆಧ್ಯಾತ್ಮ ಚಿಂತನೆಯನ್ನು ಕಲ್ಪಿಸಿ ಕೊಡಲು ಒಂದು ಉತ್ತಮವಾದ ನೆಲೆ. ಈ ನಿಟ್ಟಿನಲ್ಲಿ ಶ್ರೀ ಕೃಷ್ಣ ವೃಂದಾವನದಲ್ಲಿ ನಡೆಯುವ ಶ್ರೀಮದ್ ಭಗವದ್ಗೀತಾ ಪಾಠ, ಮಾತೃಭಾಷೆ ಹಾಗೂ ಸಂಸ್ಕೃತ ತರಗತಿಗಳು ಶ್ರೇಷ್ಠ ಸಮಾಜದ ನಿರ್ಮಾಣಕ್ಕಾಗಿ ಪೂರಕವಾದ ಸಹಕಾರವನ್ನು ನೀಡುತ್ತಿದೆ. ನಿರಂತರ ಕಲಿಕೆ ಹಾಗೂ ಅವಿರತ ಅಭ್ಯಾಸದ ಮೂಲಕ ಎಲ್ಲವನ್ನೂ ಸಾಧಿಸಲು ಸಾಧ್ಯ. ಅಂತೆ–ಯೇ ಈ ಅಮೇರಿಕಾ ದೇಶದಲ್ಲಿ ಹುಟ್ಟಿ ಬೆಳೆಯುತ್ತಿರುವಂತಹ ಈಗಿನ ಯುವ ಪೀಳಿಗೆಗೆ ನಮ್ಮ ಪದ್ಧತಿಗಳನ್ನು ಹಾಗೂ ಅವುಗಳಿಂದ ನಮ್ಮ ಜೀವನದ ಮೇಲೆ ಆಗುವ ಸತ್ಪರಿಣಾಮವನ್ನು ತಿಳಿಹೇಳಿ ತಮ್ಮ ಜೀವನದಲ್ಲೂ ಅವನ್ನು ಆಚರಣೆಗೆ ತರುವಂತೆ ಪ್ರೋತ್ಸಾಹಿಸುವುದು ನಮ್ಮೆಲ್ಲರ ಆಧ್ಯ ಕರ್ತವ್ಯ. ಯಾವುದೇ ವ್ಯಕ್ತಿಯ ಜನನಾನಂತರದ ನಾಮಕರಣದಿಂದ ಹಿಡಿದು ಅವಸಾನದ ಬಳಿಕ ನಡೆ–ಯುವ ಶ್ರಾದ್ಧ ಪದ್ಧತಿಗಳ ಪಾಮುಖ್ಯತೆ ಮತ್ತು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಅವನ್ನು ನಮ್ಮ ಮುಂದಿನ ಪೀಳಿಗೆಯೂ ಅನುಸರಿಸಿಕೊಂಡು ಹೋಗುವಂತೆ ಸ್ಫೂರ್ತಿದಾಯಕ ನೆಲೆಯಾಗಿದೆ ಶ್ರೀ ಕೃಷ್ಣ ವೃಂದಾವನ.

ಒಟ್ಟಿನಲ್ಲಿ, ಶ್ರೀ ಮಠವು ಭಗವಂತನಾದ ಶ್ರೀಹರಿ–ವಾಯು ಹಾಗೂ ಗುರುಗಳ ಕೃಪೆಯಿಂದ ಈ ಅಮೇರಿಕಾ ದೇಶದಲ್ಲಿ ಬಂದು ನೆಲೆಸಿದ ಲಕ್ಷಾಂತರ ಭಾರತೀಯರಲ್ಲಿ ಹಾಗೂ ಅವರ ಮಕ್ಕಳಲ್ಲಿ ಧರ್ಮದ ಜಾಗೃತಿಯನ್ನು ಮೂಡಿಸಿ ತಾಯ್ನುಡಿಯ ಜೊತೆಗೆ ತಾಯ್ನಾಡಿನ ಸಂಸ್ಕೃತಿಯನ್ನು ಈ ನೆಲದಲ್ಲೂ ಉಳಿಸಿ–ಬೆಳೆಸಿ ಸುಸಂಕೃತ ಸಮಾಜವನ್ನು ರೂಪಿಸುವಲ್ಲಿ ಮಹೋನ್ನತ ಪಾತ್ರವನ್ನು ನಿರ್ವಹಿಸುತ್ತಿದೆ.



# ವಾಂಛೆಗಳು

(ಇಂಗ್ಲೀಷ್ ಮೂಲ:ಗ್ರೇಸ್ ಪೇಲಿ,
**ಕನ್ನಡಕ್ಕೆ:** ಜೆ.ವಿ.ವಿ.ಮೂರ್ತಿ)

**ಜೆ.ವಿ.ವಿ.ಮೂರ್ತಿ**

ನಾನು ನನ್ನ ಮಾಜಿ ಪತಿಯನ್ನು ರಸ್ತೆಯಲ್ಲಿ ಕಂಡೆ. ಹೊಸ ಗ್ರಂಥಾಲಯದ ಮೆಟ್ಟಿಲಿನ ಮೇಲೆ ನಾನು ಕುಳಿತಿದ್ದೆ.

" ಹಲೋ! ಡಿಯರ್" ಅಂತಂದೆ.ನಾವು ಒಮ್ಮೆ ಇಪ್ಪತ್ತೇಳು ವರುಷಗಳ ವೈವಾಹಿಕ ಜೀವನ ನಡೆಸಿದ್ದೆವು,ಅಂತಲೇ ಸಮರ್ಥನೀಯ ಅನ್ನಿಸಿತು.
ಅವನಂದ, " ಏನು?ಯಾವ ಡಿಯರ್?ನನ್ನ ಡಿಯರ್ ಅಂತೂ ಅಲ್ಲ.."

ನಾನು " ಸರಿ ಬಿಡು.ನಿಜವಾದ ಭಿನ್ನಾಭಿಪ್ರಾಯ ಇದ್ದೆಡೆ ನಾನು ವಾದಕ್ಕಿಳಿಯುವುದಿಲ್ಲ" ನಾನೆದ್ದು ಗ್ರಂಥಾಲಯದೊಳಗೆ ಹೋದೆ.

ಗ್ರಂಥಪಾಲಕಿ ಪೂರ್ತಿ ಮೂವತ್ತೆರಡು ಡಾಲರು ಮತ್ತದು ಹದಿನೆಂಟು ವರುಷಗಳಿಂದ ಬಾಕಿ ಇದೆ ಅಂತಂದರು.ನಾನು ಯಾವುದನ್ನೂ ಇಲ್ಲ ಎನ್ನಲಿಲ್ಲ.ಯಾಕೆ ಅಂದ್ರೆ ಸಮಯ ಹೇಗೆ ಕಳೆದುಹೋಗುತ್ತದೆ ಎಂದು ನನಗೆ ಅರ್ಥವಾಗಿಲ್ಲ. ನಾನೆರಡು ಪುಸ್ತಕಗಳನ್ನು ಪಡೆದುಕೊಂಡಿದ್ದೆ.ಅದರ ಬಗ್ಗೆ ಅನೇಕ ಸಲ ಚಿಂತಿಸಿದ್ದೇನೆ. ನಾನಿರುವುದು ಗ್ರಂಥಾಲಯ ಕೇವಲ ಎರಡು ಕಟ್ಟಡದಾಚೆಯೇ.

ನನ್ನ ಮಾಜಿ ಗಂಡ ಪುಸ್ತಕ ಹಿಂದಿರುಗಿಸುವ ಸ್ವಾಗತಕಕ್ಷೆಗೆ ನನ್ನನ್ನು ಹಿಂಬಾಲಿಸಿದ. ಹೆಚ್ಚಿಗೆ ಏನೋ ಹೇಳಬೇಕೆಂದಿದ್ದ ಗ್ರಂಥಪಾಲಕಿಯನ್ನು ತಡೆಹಿಡಿದ. " ಹಿಂದಿನದನ್ನು ಪರಾಂಬರಿಸಿದಾಗ ಅನೇಕ ದೃಷ್ಟಿಯಲ್ಲಿ ನಮ್ಮ ವಿವಾಹ ಮುರಿದದ್ದು ನೀನು ಬರ್ಟ್ರಾಮ್ಸ್ ದಂಪತಿಗಳನ್ನು ರಾತ್ರಿ ಊಟಕ್ಕೆ ಆಹ್ವಾನಿಸದೆ ಇದ್ದದ್ದಕ್ಕೆ" ಎಂತಂದ.

" ಅದು ನಿಜ" ನಾನಂದೆ. " ಆದರೆ ವಾಸ್ತವ ನಿನಗೆ ನೆನಪಿದ್ದರೆ: ಮೊದಲು ಆ ಶುಕ್ರವಾರ ನಮ್ಮಪ್ಪನಿಗೆ ಅನಾರೋಗ್ಯವಿತ್ತು,ಅನಂತರ ಮಕ್ಕಳು ಹುಟ್ಟಿದರು,ನಂತರ ನನಗೆ ಆ ಮಂಗಳವಾರದ ಸಂಜೆ ಮೀಟಿಂಗುಗಳಿದ್ದವು, ನಂತರ ಯುದ್ಧ ಶುರುವಾಯಿತು. ಆ ನಂತರ ಅವರು ನಮಗೆ ಅಪರಿಚಿತರಾಗಿ ಹೋಗಿದ್ದರು.ಆದರೆ ನೀನು ಹೇಳಿದ್ದು ಸರಿಯೇ.ನಾನವರಿಗೆ ಊಟಕ್ಕೆ ಕರೆ ನೀಡಬೇಕಿತ್ತು"

ನಾನು ಗ್ರಂಥಪಾಲಕಿಗೆ ಮೂವತ್ತೆರಡು ಡಾಲರಿನ ಚೆಕ್ಕು ನೀಡಿದೆ.ತಕ್ಷಣವೇ ಆಕೆ ನನ್ನನ್ನು ನಂಬಿದಳು,ನನ್ನ ಹಳತನ್ನೆಲ್ಲಾ ಮರೆತು,ಮಾಹಿತಿಯನ್ನೆಲ್ಲಾ ಬೇರೆ ಯಾವ ಪೌರಸಭೆ ಮತ್ತು/ಅಥವಾ ಸರ್ಕಾರೀ ಅಧಿಕಾರಿ ವರ್ಗ ಸಾಧಾರಣವಾಗಿ ಮಾಡದೇ ಇರುವಂತೆ ಸರಿಪಡಿಸಿದಳು.

ನಾನು ಆಗತಾನೇ ಹಿಂತಿರುಗಿಸಿದ ಎಡಿತ್ ವಾರ್ಟನ್ನನ ಎರಡು ಪುಸ್ತಕಗಳಲ್ಲಿ ಮತ್ತೆ ಕಣ್ಣು ಹಾಯಿಸಿದೆ ಏಕೆಂದರೆ ಅದನ್ನು ಬಹಳ ಹಿಂದೆ ಓದಿದ್ದು ಮತ್ತು ಅವು ಹಿಂದಿಗಿಂತ ಈಗ ಹೆಚ್ಚು ಪ್ರಸ್ತುತವಾಗಿತ್ತು.ದ ಹೌಸ್ ಆಫ್ ಮರ್ತ್ ಮತ್ತು ದ ಚಿಲ್ಡ್ರನ್ ಎಂಬ ಆ ಎರಡು ಪುಸ್ತಕಗಳು ಹೇಗೆ ಅಮೆರಿಕ ಸಂಯುಕ್ತ ರಾಷ್ಟ್ರದ ನ್ಯೂಯಾರ್ಕಿನಲ್ಲಿ ಜೀವನ ಇಪ್ಪತ್ತೇಳು ವರುಷಗಳ ಹಿಂದೆಯೇ ಬದಲಾಯಿಸಿಹೋಗಿತ್ತು ಎಂಬುದರ ನಿರೂಪಣೆ.

" ನಮ್ಮಿಬ್ಬರ ಬಗ್ಗೆ ನನ್ನ ನೆನಪಿನಲ್ಲಿರುವುದು ನಮ್ಮ ಬೆಳಗಿನ ಉಪಹಾರ" ನನ್ನ ಮಾಜಿ ಗಂಡ ಹೇಳಿದ.ನನಗೆ ಆಶ್ಚರ್ಯ.ನಾವು ಹೆಚ್ಚೆಂದರೆ ಕಾಫಿ ಸೇವಿಸುತ್ತಿದ್ದೆವು ಅಷ್ಟೆ.ಆಮೇಲೆ ನನಗೆ ಜ್ಞಾಪಕಕ್ಕೆ ಬಂತು, ಅಡುಗೆಮನೆ ಸರಕುಕೋಣೆಯ ಹಿಂದಿದ್ದ ರಂಧ್ರವೊಂದು ಪಕ್ಕದ ಮನೆ ಕಡೆಗೆ ತೆರೆದಿತ್ತು ಅಂತ.ಅಲ್ಲಿ ಅವರು ಯಾವಾಗಲೂ ಸಕ್ಕರೆಪಾಕದಲ್ಲಿ ಸುಟ್ಟಿದ್ದ ಬೇಕನ್ ತಿನ್ನುತ್ತಿದ್ದರು. ಅದು ನಮಗೆ ಬೆಳಗಿನ ಉಪಹಾರದ ಒಂದು ಭವ್ಯ ಅನುಭವ ನೀಡುತ್ತಿತ್ತು,ಆದರೆ ಅದಕ್ಕೆ ನಾವು ಉಬ್ಬಲಿಲ್ಲ,ತಗ್ಗಲಿಲ್ಲ.
" ಆಗ ನಾವು ಬಡತನದಲ್ಲಿದ್ದೆವು," ನಾನೆಂದೆ.
" ನಾವು ಎಂದು ತಾನೇ ಸ್ಥಿತಿವಂತರಾಗಿದ್ದೆವು?" ,ಅವನು ಕೇಳಿದ.



" ಹೌದು, ದಿನಗಳುರುಳಿದಂತೆ ನಮ್ಮ ಜವಾಬ್ದಾರಿಗಳು ಹೆಚ್ಚಾಗುತ್ತಿದ್ದಾಗ ನಮಗೆ ಯಾವುದೂ ದಾರಿದ್ರ್ಯವಿರಲಿಲ್ಲ.ನೀನು ಆರ್ಥಿಕ ಭದ್ರತೆಗೆ ಸಾಕಷ್ಟು ಲಕ್ಷ್ಯ ಕೊಟ್ಟೆ" ಅಂತ ಅವನಿಗೆ ನೆನಪಿಸಿದೆ. ಮಕ್ಕಳು ವರ್ಷದಲ್ಲಿನಾಲ್ಕು ವಾರ ಶಿಬಿರಕ್ಕೆ ಹೋಗುತ್ತಿದ್ದರು, ಎಲ್ಲರಂತೆ ಯೋಗ್ಯ ಮೇಲ್ವಸ್ತ್ರದ ಜತೆ ಹಾಸಿಗೆಚೀಲ ಬೂಟುಗಳ ಸಹಿತ. ಅವರು ತುಂಬಾ ಚೆನ್ನಾಗಿ ಕಾಣ್ತಿದ್ದರು.ಚಳಿಗಾಲದಲ್ಲಿ ನಮ್ಮ ನಿವಾಸ ಬೆಚ್ಚಗಿರುತ್ತಿತ್ತು ಹಿತವಾದ ಕೆಂಪು ದಿಂಬುಗಳು ಮತ್ತಿನ್ನಿತರ ಸಾಧನಗಳೊಂದಿಗೆ.

## ಸಣ್ಣ ಕಥೆ

ಹಿಂದಿನ ಪುಟದಿಂದ...

" ನನಗೆ ಹಾಯಿ ದೋಣಿ ಬೇಕಿತ್ತು.ಆದರೆ ನಿನಗೆ ಏನೂ ಬೇಡ ಅಂತಿ–ದ್ದೆ" .

" ಕಹಿ ಮಾತಾಡಬೇಡ, ನಾನೆಂದೆ.ಈಗಲೂ ವೇಳೆ ಮೀರಿಲ್ಲ"

" ಇಲ್ಲ," ಬಹಳ ಸಾಂದ್ರದ ಕಹಿಯನ್ನು ಹೊತ್ತು ಹೇಳಿದ.

" ನಾನು ಹಾಯಿದೋಣಿಯೊಂದನ್ನು ಹೊಂದಬಹುದು. ನಿಜ ಹೇಳಬೇಕೆಂದರೆ ಹದಿನೆಂಟು ಅಡಿ ಸುರಕ್ಷಾ ಸಜ್ಜಿಕೆಯ ದೋಣಿಗೆ ಹಣ ಪಾವತಿಮಾಡಿಯಾಗಿದೆ.ಈ ವರ್ಷ ನನ್ನ ವ್ಯವಹಾರ ಚೆನ್ನಾಗಿ ನಡೆಯುತ್ತಿದೆ ಮತ್ತು ವೃದ್ಧಿಯನ್ನು ಎದುರುನೋಡುತ್ತಿದ್ದೇನೆ.ಆದರೆ ನಿನ್ನ ಬಗ್ಗೆ ಹೇಳುವುದಾದರೆ ಕಾಲ ಮೀರಿದೆ.ನೀನು ಯಾವಾಗಲೂ ಏನೂ ಬಯಸುವುದಿಲ್ಲ" .

ಇಪ್ಪತ್ತೇಳು ವರುಷದುದ್ದಕ್ಕೂ ಅವನಿಗಿದ್ದ ಚಾಳಿ ನಲ್ಲಿ ಚರಂಡಿ ಕಾರ್ಮಿಕನ ಥರ ಸರ್ಪದಂತಿನ ಪಾಶ ಉಪಯೋಗಿಸುವಂತೆ ನಿಕೃಷ್ಟ ಹೇಳಿಕೆಯ ಮೂಲಕ ನನ್ನ ಕಿವಿ ಗಂಟಲುಗಳನ್ನು ಛೇದಿಸಿ ಹೃದಯಕ್ಕೆ ಅರ್ಧ ದೂರದವರೆಗೆ ತಾಗಿಸುವುದು.ನಂತರ ನಾನು ಆದರ ಉಪಟಳದಿಂದ ಉಸಿರು ನಿಂತಂತಾಗುತ್ತಿರುವಂತೆಯೇ ಅವನು ಅದೃಶ್ಯನಾಗುತ್ತಿದ್ದ. ಅದರರ್ಥ,ನಾನು ಗ್ರಂಥಾಲಯದ ಮೆಟ್ಟಿಲ ಮೇಲೆ ಕುಳಿತೆ,ಅವನು ಹೊರಟುಹೋದ.

ನಾನು ದ ಹೌಸ್ ಆಫ್ ಮರ್ತ್ ಪುಸ್ತಕದಲ್ಲಿ ಸ್ವಲ್ಪ ಕಣ್ಣು ಹಾಯಿಸಿದೆ.ಆದರೆ ಆಸಕ್ತಿ ಹೊರಟುಹೋಗಿತ್ತು.ನಾನು ತ್ರೀವ್ರ ಆಪಾದಿತಳಾದಂತೆ ಭಾಸವಾಯಿತು.ಈಗ,ಇದು ನಿಜ,ನನಗೆ ಬೇಡಿಕೆಗಳು ಮತ್ತು ಸಂಪೂರ್ಣ ಅವಶ್ಯಕತೆಗಳು ಕಡಿಮೆ,ಆದರೆ ನನಗೆ ಏನೋ ಒಂದು ಬೇಕು.

ನಾನು ಉದಾಹರಣೆಗೆ,ಬೇರೆ ವ್ಯಕ್ತಿಯಾಗಬೇಕು.ನಾನು ಈ ಎರಡು ಪುಸ್ತಕಗಳನ್ನು ಎರಡು ವಾರದಲ್ಲಿ ಹಿಂದಿರುಗಿಸುವ ಹೆಣ್ಣಾಗಬೇಕು.ನಾನು ಈ ವಿದ್ಯಾ ವ್ಯವಸ್ಥೆಯನ್ನು ಬದಲಾಯಿಸುವ ಪರಿಣಾಮಕಾರಿ ಪ್ರಜೆ–ಯಾಗಬೇಕು,ಈ ನನ್ನ ಪ್ರಿಯ ನಗರಕೇಂದ್ರದ ತೊಂದರೆಗಳ ಬಗ್ಗೆ ಅಂದಾಜು ಸಮಿತಿಗೆ ಭಾಷಣ ನೀಡಬೇಕು.

ನಾನು ನನ್ನ ಮಕ್ಕಳಿಗೆ ಅವರು ದೊಡ್ಡವರಾಗುವುದಕ್ಕೆ ಮುನ್ನ ಈ ಯುದ್ಧವನ್ನು ಕೊನೆಗೊಳಿಸುತ್ತೇನೆಂದು ವಚನವಿತ್ತಿದ್ದೆ.

ನಾನು ಕಡೆಯವರೆಗೂ ಒಬ್ಬನೊಡನೆ ವಿವಾಹವಾಗಿ ಉಳಿಯುವುದಕ್ಕೆ,ಮಾಜಿ ಗಂಡನೋ ಅಥವಾ ಈಗಿನವನೋ,ಆಸೆಪಟ್ಟಿದ್ದೆ.ಇಬ್ಬರಲ್ಲೂ ಜೀವನಪರ್ಯಂತಕ್ಕೆ,ವಾಸ್ತವದಲ್ಲಿ ಅದು ಅಂತಹ ಧೀರ್ಘಕಾಲದ್ದೇನೂ ಅಲ್ಲ ಎಂದು ಅರಿವಾದಮೇಲೆ,ಬೇಕಾಗಿದ್ದ ಶೀಲವಿತ್ತು.ಯಾರೊಬ್ಬರ ಸಂಪನ್ನತೆಗಳನ್ನೂ ಬರಿದು ಮಾಡುವುದಕ್ಕಾಗುವುದಿಲ್ಲ ಅಥವಾ ಇಷ್ಟು ಮೊಟಕಾದ ಜೀವಾವಧಿಯಲ್ಲಿ ಅವನ ತರ್ಕದ ಬಂಡೆಗಳ ಕೆಳಗೂ ನುಸಿಯುವುದಕ್ಕಾಗುವುದಿಲ್ಲ.

ಈ ದಿನ ಬೆಳಗ್ಗೆ ತಾನೇ ನಾನು ಕಿಟಕಿಯ ಹೊರಗೆ ಕೆಳಗೆ ಹಾದುಹೋಗುತ್ತಿದ್ದ ರಸ್ತೆಯನ್ನು ವೀಕ್ಷಿಸಿದಾಗ ಕೆಲವು ವರುಷಗಳ ಹಿಂದೆ ಮಕ್ಕಳು ಹುಟ್ಟುವುದಕ್ಕೆ ಮುಂಚೆ ನೆಟ್ಟಿದ್ದ ವರುಷಕ್ಕೊಮ್ಮೆ ಎಲೆ ಕಳೆದುಕೊಳ್ಳುವ ಸೈಕಮೋರ್ ಗಿಡಗಳು ತಮ್ಮ ಪರಿಪೂರ್ಣ ವಯಸ್ಸು ತಲುಪಿದ್ದನ್ನು ಕಂಡೆ.

ಹೌದು,ಸರಿಯೇ!ಈ ಎರಡು ಪುಸ್ತಕಗಳನ್ನು ಗ್ರಂಥಾಲಯಕ್ಕೆ ಹಿಂದಿರುಗಿಸುವುದೆಂದು ನಿರ್ಧರಿಸಿದೆ.

ಇದು ಏನು ರುಜುವಾತು ಮಾಡುತ್ತದೆಂದರೆ ನಾನು ಆದರದಿಂದ ಸಂಭಾಷಿಸುವ ವ್ಯಕ್ತಿ ಎಂದು ತಿಳಿದಿದ್ದರೂ ಒಬ್ಬ ವ್ಯಕ್ತಿ ಅಥವಾ ಒಂದು ಘಟನೆ ನನ್ನ ಮಾರ್ಗದಲ್ಲಿ ತೋರಿ ಅಲ್ಲಾಡಿಸಿದಾಗ ಅಥವಾ ಮನದಟ್ಟಾದಾಗ ನಾನು ಸೂಕ್ತ ಕ್ರಮ ಕೈಗೊಳ್ಳಬಲ್ಲೆ ಎಂದು.

*************

(ಇಂಗ್ಲೀಷ್ ಲೇಖಕಿ ಗ್ರೇಸ್ ಪೇಲಿ ನ್ಯೂಯಾರ್ಕಿನಲ್ಲಿ ರಷ್ಯದಿಂದ ವಲಸೆಬಂದ ಯೆಹೂದಿ ದಂಪತಿಗಳಿಗೆ ಜನಿಸಿದಾಕೆ.ತನ್ನ ಸುತ್ತಲಿನ ವಲಸೆಗಾರರ ಜೀವನವೇ ಅವಳ ಕತೆಗಳಿಗೆ ಗ್ರಾಸವಾಯಿತು.ಅವಳ "ಕಲೆಕ್ಟೆಡ್ ಸ್ಟೋರೀಸ್"(ಕಥಾಸಂಕಲನ) ಯು.ಎಸ್.ರಾಷ್ಟ್ರೀಯ ಪುಸ್ತಕ ಪ್ರಶಸ್ತಿ ಗೆದ್ದುಕೊಂಡಿತು.೧೯೯೪ರಲ್ಲಿ ಉತ್ತಮ ಸಾಹಿತ್ಯಕ್ಕೆ ನೀಡುವ"ಪುಲಿಟ್ಜೆರ್ ಪ್ರಶಸ್ತಿ" ಅವಳದಾಯಿತು.ತನ್ನ ೮೪ನೇ ವಯಸ್ಸಿನಲ್ಲಿ ಆಗಸ್ಟ್ ೨೦೦೭ರಲ್ಲಿ ನಿಧನ ಹೊಂದಿದಳು."ವಾಂಛೆಗಳು" ಅಥವಾ "ಬೇಕುಗಳು" ಎಂಬ ಸಣ್ಣ ಕಥೆ ಆಕೆಯ ಕಥಾ ಸಂಕಲನದಿಂದ ಆಯ್ದದ್ದು)

## ಒಗಟುಗಳು



೧. ತೇರು ಓಡುತ್ತೆ ಹೂವು ಉದುರುತ್ತೆ

೨. ಕೆಮ್ಮಣ್ಣನ ಗುಂಡೀಲಿ ಗುಮ್ಮಣ್ಣ ಕೂತುಕೊಂಡು ಕಂಡಿದ್ದು ಹೇಳುತ್ತಾನೆ ಕಾಣದಿದ್ದೂ ಹೇಳುತ್ತಾನೆ.

೩. ಬಂಗಾರದ ದೇವಸ್ಥಾನ ಬೆಳ್ಳಿ ದೇವರು ಗೋಡೆ ಒಡೀಬೇಕು ದೇವರನ್ನು ನೋಡಬೇಕು

ನಿಮ್ಮ ಉತ್ತರಗಳನ್ನು vani@brindavana.org ಗೆ ಕಳುಹಿಸಿ. ಮೊದಲು ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

# ಅಮ್ಮಂದಿರ ದಿನ



**ಲಕ್ಷ್ಮಿ ಕೊಲಾಲ್**

ಎಲ್ಲಾ ತಾಯಂದಿರಿಗೆ "ಅಮ್ಮಂದಿರ ದಿನ"ದ ಹಾರ್ದಿಕ ಶುಭಾಶಯಗಳು...

***ಅಮ್ಮ,***

*ಆ ಜಗದೊಡೆಯ ಎಲ್ಲ ಸೃಷ್ಟಿಸಿದ,*
*ಈ ಬಾನು, ಭುವಿ, ಸೂರ್ಯ,ಚುಕ್ಕಿ*
*ಚಂದ್ರಮ,ಗಿರಿ ಜನ ವನ ಸಾಗರ,*
*ಪಶು ಪಕ್ಷಿ ಎಲ್ಲ ಜೀವ ಜಂತುಗಳು,*
*ಈ ತನ್ನೆಲ್ಲ ಆ ಅದ್ಭುತ ಕಾರ್ಯಕೆ*
*ಸುಮ್ಮನೆ ತಾನೆ ಬಳಲಿ ಬಸವಳಿದು*
*ತನಗರಿವಿಲ್ಲದೇ "ಅಮ್ಮ "ಎಂಬ ಸುಂದರ*
*ಎರಡಕ್ಷರಗಳ ಸುಮ್ಮನೆ ಉಚ್ಚರಿಸಿದ...*

*ತನಗರಿವಿಲ್ಲದಂತೆಯೇ ಅದೆಂತದೋ*
*ಅದ್ಭುತ ದಿವ್ಯಾನುಭವವ ಸವಿದ*
*ಬೋಧಿ ಮರದಡಿಯಲಿ ಕುಳಿತ,*
*ಆ ಬುದ್ದನಂತೆ ತಾನೂ ಬದ್ದನಾದ*
*ಆತ್ಮಸಾಕ್ಷಾತ್ಕಾರದ ಹಾದಿಯಲಿ*
*ತನ್ನ ಶ್ರೇಷ್ಠ ಇರುವ ಕಂಡು ಬೆರಗಾದ*
*ತಾನೆಂದೂ ಊಹಿಸದ ಅಪ್ರತಿಮ*
*ಸಹಾನುಭೂತಿಯ ಹೆಮ್ಮರವಾದ...*

*ಬಿರಿದ ಧರಯಂಗಳಕೆ ಹರಿದ ಒಲವ*
*ಮಳೆಯ ನೋಡಿ ಬೆರಗಾದ...ಅಖಂಡ*
*ಕಾರುಣ್ಯದ ತಂಪು ತಂಗಾಳಿಯ ಹೊನಲ*
*ಕಂಡುಮೂಕನಾಗಿ ಏನೂ ಅರಿಯಲಾರದೆ*
*ವಿಸ್ಮಿತನಾದ...ಪ್ರೀತಿಯೆಂಬ ಅಲೆಗಳ ಸುಂದರ*
*ಕಲರವ ಕೇಳಿ ಒಮ್ಮೆಲೇ ತಾನೇ ಸೃಷ್ಟಿಸಿದ*
*"ಅಮ್ಮ " ಎಂಬ ಆ ಎರಡಕ್ಷರಗಳ ಆ ದಿವ್ಯ*
*ಶಕ್ತಿಗೆ ಭಕ್ತಿಯಿಂದ ತಲೆಬಾಗಿ ತಾನೇ ಶರಣಾದ...*

ಈ ಕವನ ಶ್ರೀಯುತ ಲೋಕೇಶ ರವರು ಬೆಂಗಳೂರಿನಲ್ಲಿ ಬರೆದದ್ದು.. ಅಬ್ಬಾ ಈ ಅಮ್ಮ ಎನ್ನುವ ಪದವು ಬಹಳ ಸುಂದರ ಮತ್ತು ಶಕ್ತಿಯುತ. ಆ ಜಗದೊಡೆಯನೇ ಅಮ್ಮ ನ ಪ್ರೀತಿ ಕಾರುಣ್ಯವ ನೋಡಿ ಮೂಕವಿಸ್ಮಿತನಾದನೆಂದರೆ ತಾಯಿಯ ಸೃಷ್ಟಿಯೇ ಅದ್ಭುತವಾದದ್ದು . "ಮದರ್ಸ್ ಡೇ" ಅಥವಾ "ಅಮ್ಮಂದಿರ ದಿನ "ದ ಆಚರಣೆ ಪ್ರಾರಂಭವಾದದ್ದು ಅಮೇರಿಕ ದೇಶದಲ್ಲಿ. ಈ ದಿನದ ಹುಟ್ಟಿಗೆ ಕಾರಣ ಅನಾ ಜಾರ್ವಿಸ್ ಎಂಬ ಮಹಿಳೆ. ಈ ದಿನದ ಆಚರಣೆಯನ್ನು ೧೯೦೮ ರ ಮೇ ತಿಂಗಳ ಎರಡನೇ ಭಾನುವಾರದಂದು ಅನಾ ಜಾರ್ವಿಸ್ ಹುತಾತ್ಮರಾದ ತನ್ನ ತಾಯಿ "ಅನ್ನ ರೀವ್ಸ್ ಜಾರ್ವಿಸ್" ಸ್ಮರಣಾರ್ಥ ದಿನಕ್ಕೋಸ್ಕರ ಮತ್ತು ಅಮೇರಿಕಾ ದೇಶದ ಸಿವಿಲ್ ವಾರ್ ನಲ್ಲಿ ಗಾಯಾಳುವಾದ ಯೋಧರ ಶುಶ್ರೂಷೆಗೋಸ್ಕರ ಜಾರಿಗೆ ತಂದರು. ಸರ್ಕಾರದಿಂದ ಬಹಳ ಅಡಚಣೆಗಳಾದರೂ ಅನಾ ಜಾರ್ವಿಸ್ ರವರ ಪರಿಶ್ರಮದಿಂದ ೧೯೧೧ ರಲ್ಲಿ ಮದರ್ಸ್ ಡೇ ದಿನ ರಜಾ ದಿನವೆಂದು ಘೋಷಿಸಲಾಯಿತು. ಕ್ರಮೇಣ ಈ ದಿನವೂ ಸ್ವಲ್ಪ ವ್ಯಾಪಾರೀಕೃತವಾಯಿತು . ಗ್ರೀಟಿಂಗ್ ಕಾರ್ಡ್ ಮತ್ತು ಉಡುಗೊರೆಗಳನ್ನು ತರುವ ಮತ್ತು ಕೊಡುವ ಹವ್ಯಾಸಗಳು ಬಳಕೆಗೆ ಬರಲು ಪ್ರಾರಂಭಿಸಿದವು. ಆ ದಿನಗಳಲ್ಲಿ ಅನಾ ಜಾರ್ವಿಸ್ ರವರಿಗೆ ಈ ವಿಷಯದಲ್ಲಿ ಅಸಮಾಧಾನವು ಇತ್ತು ಏಕೆಂದರೆ ಅವರು ಪ್ರೀತಿಗೆ ಬೆಲೆ ಕೊಟ್ಟಿದ್ದವರು . ಮೊದಲು ಅಮೇರಿಕ ಮತ್ತಿತರ ಪಾಶ್ಚಾತ್ಯ ದೇಶಗಳಲ್ಲಿ ಮದರ್ಸ್ ಡೇ ಆಚರಿಸುತ್ತಿದ್ದರಾದರೂ ಇತ್ತೀಚೆಗೆ ಪ್ರಪಂಚದಾದ್ಯಂತ ಎಲ್ಲೆಡೆಯೂ ಈ ದಿನದ ಆಚರಣೆ ಸಂಭ್ರಮದಿಂದ ನಡೆಯುತ್ತಿದೆ..ತಾಯಿಯನ್ನು ಮರೆಯಲಾಗದು ಆದರೂ ನೆನೆಯುವುದೊಂದು ಸುಂದರ ಅನುಭವ. ಅಮ್ಮನ ಪ್ರೀತಿಯಲ್ಲೊಂದು ನೀತಿಯು ಅಡಗಿರುವುದು, ನಿಯಮವು ಬೆಳಗಿರುವುದು ಎನ್ನುವುದು ಬಹಳ ಸತ್ಯ. ಅಮ್ಮನಲ್ಲದೆ ಆ ಸ್ಥಾನದಲ್ಲಿ ನಿಂತ ಯಾವುದೇ ವ್ಯಕ್ತಿಗೂ ಸನ್ಮಾನ ಸಲ್ಲಲೇ ಬೇಕು . ನಮ್ಮ ನ್ಯೂ ಜೆರ್ಸಿ ಯಲ್ಲಿ ಶಾಲೆಗಳಲ್ಲಿ, ರೆಸ್ಟೋರೆಂಟ್ ಗಳಲ್ಲಿ , ಮನೆಗಳಲ್ಲಿ ಕೂಡ ನಮ್ಮೆಲ್ಲ ಸ್ನೇಹಿತರು ಮದರ್ಸ್ ಡೇ ಯನ್ನು ಆಚರಿಸಿದರು. ಹೀಗೆ ಪ್ರೀತಿ ವಿಶ್ವಾಸ ಬೆಳೆಯಲಿ ಮತ್ತು ಅಮ್ಮನ ಮಮತೆಗೆ ಎಂದೂ ಕೊರತೆ ಬಾರದಿರಲಿ ಎಂಬುದೇ ನಮ್ಮೆಲ್ಲರ ಆಶಯ ಅಲ್ಲವೇ..?



(ಅನ್ನಾ ಜಾರ್ವಿಸ್)

# ಸಾಹಿತ್ಯರಂಗದಲ್ಲಿ ಮಿಂಚಿದ ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ಮಕ್ಕಳು



**ಉಷಾ ಪ್ರಸನ್ನ**

ಮೇ ೧೯ರಂದು ನಾನು ಸಾಹಿತ್ಯ ಸಭೆ ತಲುಪಿದ್ದೆ.. ತತ್ ಕ್ಷಣವೇ ಎಲ್ಲರು ಬಂದು ನನಗೆ ಅಭಿನಂದಿಸಲು ಶುರುಮಾಡಿದರು..ನನಗೆ ಆಶ್ಚರ್ಯ ನಾನು ಅಂತದ್ದು ಏನು ಮಾಡಿದೆ ಅಂತ... ಅವರು ಒಂದೇ ಸಮನೆ ಮಕ್ಕಳ ಕಾರ್ಯಕ್ರಮದ ಬಗ್ಗೆ ಹೊಗಳಲು ಶುರುಮಾಡಿದರು...ಮಕ್ಕಳ ಮಾತು..ಸ್ಪಷ್ಟತೆ, ವೇದಿಕೆಗೆ ಬರುವುದು..ಹೋಗುವಾಗ ಯಾವ ಕಡೆ ನಿರ್ಗಮಿಸಬೇಕು..ಎಲ್ಲಿ ನಿಲ್ಲಬೇಕು ಹೇಗೆ ಮಾತಾಡಬೇಕು ಮೈಕನ್ನು ಹೇಗೆ ಉಪಯೋಗಿಸಬೇಕು..ಅಬ್ಬಬ್ಬ  ನಿಲ್ಲಿಸ್ತಾನೆ ಇಲ್ಲ..

ಒಬ್ಬರು ಬಂದು ಬೆರಳ್ಗೆ ಕೊರಳ್ ಮಕ್ಕಳು ಎಷ್ಟು ಚೆನ್ನಾಗಿ ಮಾಡಿದರು..ಹಳೇಗನ್ನಡ ಎಷ್ಟು ಲೀಲಾಜಾಲವಾಗಿ ಮಾತನಾಡಿದರು..ಎಕಲವ್ಯ ಜಾಣ್ಮೆಯಿಂದ ದ್ರೋಣನ ಪ್ರತಿಮೆಯನ್ನು  ಗಾಳಿಗೆ ಬೀಳದಂತೆ ಹಿಡಿದುಕೊಂಡು ಅವನ ಅಬ್ಬೆಯ ಹತ್ತಿರ ಮಾತಾಡಿದ್ದು..ಅಬ್ಬೆಯ ಅಮೋಘವಾದ ನಟನೆ ಮಗನ ಬೆರಳು ಗುರುದಕ್ಷಿಣೆಯಾಗಿ ಕೊಟ್ಟಾಗ...ಹೇಳುತ್ತಾ ದಿಗ್ಭ್ರಮೆಯಾಗಿಬಿಟ್ಟರು.

ವಾಷಿಂಗ್ಟನಿಂದ ಬಂದಿದ್ದವರೊಬ್ಬರು ಈ ಮಕ್ಕಳು ಎಷ್ಟು ವರ್ಷದಿಂದ ಇಲ್ಲಿದ್ದಾರೆ ಅಂತ ಕೇಳಿದರು..ನಾನು ಯಾರು ಅಂದಾಗ ಮಹಾರಾತ್ರಿಯಲ್ಲಿ ಮಾಡಿರುವ ಮಕ್ಕಳು..ರಾಗವಾಗಿ ಹಾಡುತ ಬಂದ ಹುಡುಗಿ, ಯಕ್ಷ, ಗಂಧರ್ವ, ಕಿನ್ನರರ ವಸ್ತ್ರವಿನ್ಯಾಸ.. ಸಿದ್ದಾರ್ಥ ಹಾಗು ಚೆನ್ನಜ್ಜನ ಸ್ಪಷ್ಟವಾದ ಮಾತು ಹಾಗು ನಟನೆ..ತುಂಬ ಚೆನ್ನಾಗಿತ್ತು, ಅದು ಬುದ್ದ ಪೂರ್ಣಿಮ ದಿವಸ ಎಂತ ಒಳ್ಳೆ ನಾಟಕ ಅಂತ ಖುಷಿಪಟ್ಟರು.

ಹೆಣ್ಣು ಮಕ್ಕಳ ನೃತ್ಯ ಹಾಗು ಉಪಯೋಗಿಸಿದ ನಮ್ಮ ಅಚ್ಚುಮೆಚ್ಚಿನ ಕವಿಗಳ ಹಾಡುಗಳು ಅಲ್ಲಿ ಕುಳಿತು ನೋಡುತ್ತಿದ್ದವರಿಗೆಲ್ಲ ಖುಷಿಗೆ ಚಪ್ಪಾಳೆ ತಟ್ಟುವಂತೆ  ಮಾಡಿದ್ರಲ್ಲಿ ಸಂಶಯವಿಲ್ಲ.

ಆದರೆ ನಮ್ಮ ಶ್ರೀವತ್ಸ ಜೋಷಿಯವರು ನಮ್ಮ ಜಲಗಾರನ.. 'ಮೂಡಿ ಬಾ ಹೊರಗೆ ಬಾ ಜಗದ ಕಣ್ಣೆ ಬಾ ಬಾ' ಹಾಡು ಕೇಳುತ್ತಾ ಹಾಗು ನಮ್ಮ ಜಗದ ಜಲಗಾರನ ನೋಡುತ್ತಾ ಹಾಗೆ ಮೈ ಮರೆತು ವೇಳೆಯ ಪರಿವೇ ಇಲ್ಲದೆ ದಿಗ್ಭ್ರಮೆಯಾಗಿ ಕೈಯಲ್ಲಿದ್ದ ಸಮಯದ ಘಂಟೆಯನ್ನು ಮರತೇ ಹೋಗಿದ್ದರು...ಅವರೇ ಯಾಕೆ ಅಲ್ಲಿ ನೆರೆದ್ದಿದ್ದ ಪ್ರತಿಯೊಬ್ಬರು ಮೂಕವಿಸ್ಮಿತರಾಗಿ ಜಲಗಾರನೊಳಗೆ ಐಕ್ಯವಾಗಿದ್ರು...

ಓ ಯಾರ ಬಗ್ಗೆ ಹೇಳ್ತಿದೀನಿ ಅಂತ ಯೋಚಿಸುತ್ತೀದ್ದೀರಾ..ಅದೇ ನಮ್ಮ ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ಮಕ್ಕಳು ಮಾಡಿದ ನಮನ ನಾಟಕ. ಆರ್ಚನ, ಬಾಸ್ಕರ್, ರೋಹಿಣಿ, ಉಷಾ..ಹಾಗು ಎಲ್ಲ ಪೋಷಕರ ಸಹಾಯ ದಿಂದ. ನಮ್ಮ ಪುಟ್ಟಣ್ಣರಾದ ಉಮ ನಿರೂಪಿಸಿದ ಅದ್ಭುತವಾಗಿ ಮೂಡಿದ ನಾಟಕ.,ಮಕ್ಕಳ ಕೈಯಲ್ಲಿ ಮಾಡಿಸಿ ಎಲ್ಲರ ಮನೆ ಮಾತಾಗಿರುವ ನಮ್ಮ ಮಕ್ಕಳಿಗೆ ನನ್ನ ನಮನ.

ಭಾಗವಹಿಸಿದ ಮಕ್ಕಳ ಪಾತ್ರ ಪರಿಚಯ:

**ಬೆರಳ್ಗೆ ಕೊರಳ್**

ಏಕಲವ್ಯ – ಆರುಷ್ ಮೈನಂಪಾಟಿ,  ಅಬ್ಬೆ – ಸುದೀಪ್ತ ಮೂರ್ತಿ, ದ್ರೋಣಾಚಾರ್ಯ – ತೇಜಸ್ ಜಾಡರ್

**ಮಹಾರಾತ್ರಿ**

ಯಕ್ಷ – ಅಪ್ರಮತ್ ಭಾರಧ್ವಾಜ್, ಗಂಧರ್ವ– ಅನಿರುಧ್ ವಿನೋದ್, ಕಿನ್ನರ – ವರುಣ್ ಕೋಟ, ಸಿದ್ದಾರ್ಥ– ಸಂಕೀರ್ತ್ ಭಾರಧ್ವಾಜ್, ಚನ್ನಜ್ಜ – ನಿಹಾರ್ ತಂತ್ರಿ, ಮೋಹಿನಿ – ರಚನ ಆಚಾರ್ಯ, ಕೈಲಾಸ – ಅಚಿಂತ್ಯ ಭಾರಧ್ವಾಜ್

**ಜಲಗಾರ**

ಭೂದೇವಿ – ಸ್ಪಂದನ ಅರುಣ್, ರೈತ ೧ – ಸ್ಕಂದ ಅರುಣ್, ರೈತ ೨ – ಸಮರ್ಥ್ ಭಾರಧ್ವಾಜ್, ಯುವತಿ – ಅವನಿ ನಾಯಕ್ ಜಲಗಾರ – ತನವ್ ಗೌಡ, ಶಿವ – ಸಮೀರ್ ರಾವ್ ಕಟ್ಟೆ

**ನರ್ತಕಿಯರು**

ಅಂಶು  ಅಂದವರಪು, ಧನ್ವಿ ಕಶ್ಯಪ್, ಸಿರಿ ತೈಲಗೇರಿ

**ಸಹ ನಿರ್ದೇಶಕರು**

ಅರ್ಚನ  ಆಚಾರ್ಯ, ರೋಹಿಣಿ ಅನಂತರಾಮ್, ಭಾಸ್ಕರ ತೈಲಗೇರಿ

# ಸಂತ ಶಿಶುನಾಳ ಶರೀಫರ ರೂಪಕ



**ಜ್ಯೋತಿ ಚಂದ್ರ**



ಬೃಂದಾವನ ವಸಂತೋತ್ಸವದಲ್ಲಿ ಎಂದಿನಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸೌತ್ ಬ್ರುನ್ಸ್ವಿಕ್ ಕನ್ನಡ ಶಾಲೆಯ ಮಕ್ಕಳು ನಾಟಕ ಪ್ರದರ್ಶನ ಮಾಡಿದ್ದರು.ಎಲ್ಲ ವಿದ್ಯಾರ್ಥಿಗಳು ಈ ನಾಟಕದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ನಾಟಕಕ್ಕಾಗಿ ಆಯ್ಕೆ ಮಾಡಿಕೊಂಡ ವಿಷಯ "ಶಿಶುನಾಳ ಶರೀಫರ ಬಾಲ್ಯ ಜೀವನ". ಹಿಂದೂ ಮತ್ತು ಮುಸ್ಲಿಂ ಧರ್ಮಗಳ ಸಂಗಮದ ಕನಸು ಕಂಡ ಸಂತ, ನೂರಾರು ತತ್ವಪದಗಳನ್ನು ಹಾಡಿ ಜನಮನ ಗೆದ್ದ ಶರೀಫರ ಬಾಲ್ಯ ಕೆಲವು ಘಟನೆಗಳು ಮತ್ತು ಅವರ ಜೀವನದಲ್ಲಿ ಗೋವಿಂದ ಭಟ್ಟರ ಪ್ರಭಾವ , ಶರೀಫರನ್ನು ಸಾಮಾಜಿಕ ಸುಧಾಕರನ್ನಾಗಿ ಹೇಗೆ



ರೂಪಾಂತರ ಮಾಡಿತು ಎಂದು ಈ ನಾಟಕ ರೂಪದಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದೆವು. ಅದರೊಂದಿಗೆ ಹಾಡು ಮತ್ತು ನೃತ್ಯವನ್ನು ಕಥಾವಸ್ತುವಾಗಿ ಸೇರಿಸಿ ಪ್ರೇಕ್ಷಕರ ಮನರಂಜಿಸಲು ನಮ್ಮ ಸೌತ್ ಬ್ರುನ್ಸ್ವಿಕ್ ಕನ್ನಡ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿದ್ದ ಮೊಟ್ಟ ಮೊದಲ ನಾಟಕ ಪ್ರದರ್ಶನ ಇದಾಗಿತ್ತು.

ನಾಟಕವು "ತರವಲ್ಲ ತೆಗಿ ನಿನ್ನ ತಂಬೂರಿ" ಹಾಡಿನ ನೃತ್ಯದೊಂದಿಗೆ "ಕೋಡಗನ ಕೋಳಿ ನುಂಗಿತ್ತಾ" ನೃತ್ಯದೊಂದಿಗೆ ಅಂತ್ಯಗೊಂಡಿತು. ನಾಟಕದ ನಡುವೆ ಕಥೆಗೆ ಅನುಗುಣವಾಗಿ ಹಾಡುಗಳನ್ನು ಮಕ್ಕಳು ಬಹಳ ಸುಂದರವಾಗಿ ಹಾಡಿ ಪ್ರೇಕ್ಷಕರ ಮನ ಗೆದ್ದರು. "ದೊರಕಿದಾ ಗುರು ದೊರಕಿದಾ" ಮತ್ತು" ಹಾಕಿದ ಜನಿವಾರವಾ" ಹಾಡುಗಳು ಬಹಳ ಅದ್ಭುತವಾಗಿ ಮೂಡಿ ಬಂತು. ಗುರು ಗೋವಿಂದ ಭಟ್ಟರ , ಶರೀಫರ ಮತ್ತು ಶಿಷ್ಯರ ಪಾತ್ರ ನಿರ್ವಹಿಸಿದ ಮಕ್ಕಳ ಸಂಭಾಷಣೆ ಹಾಗು ನಾಟಕ ನಿರೂಪಣೆ ತುಂಬಾ ಅಮೋಘವಾಗಿ ಮೂಡಿ ಬಂತು.

ನಾಟಕಕ್ಕಾಗಿ ಬೇಕಾದ ಕೆಲವು ಆಧಾರಗಳನ್ನು ಬಳಕೆ ಮಾಡಲು ಮರೆತರೂ , ತಾಂತ್ರಿಕ ಸಮಸ್ಯೆಗಳು ಎದುರಾದರೂ . ಯಾವುದನ್ನೂ ಲೆಕ್ಕಿಸದೆ ಮಕ್ಕಳು ನಿರಾತಂಕವಾಗಿ ನಟಿಸಿ , ಹಾಡಿ , ನರ್ತಿಸಿ ಪ್ರೇಕ್ಷಕರ ಮನರಂಜಿಸಿದರು.

ನಾಟಕ ತುಂಬಾ ಚೆನ್ನಾಗಿ ಎಂದು ಹಲವರು ಭಾವನೆ ವ್ಯಕ್ತಪಡಿಸಿದಾಗ ನಮಗೆಲ್ಲಾ ಸಂತೋಷವಾಯಿತು. ಒಟ್ಟಾರೆ ಮಕ್ಕಳ ನಿರಂತರ ಅಭ್ಯಾಸ ಫಲಪ್ರದವಾಗಿತ್ತು.

ಮಕ್ಕಳಿಗೆ ಕನ್ನಡದಲ್ಲಿ ಸಂಭಾಷಣೆ ಹಾಗೂ ನಿರೂಪಣೆ ಮಾಡಿಸಬೇಕೆಂಬ ನಮ್ಮ ಪ್ರಯತ್ನವೂ ಫಲಕಾರಿಯಾಯಿತು. ಈ ಸಂದರ್ಭದಲ್ಲಿ ಸೌತ್ ಬ್ರುನ್ಸ್ವಿಕ್ ಕನ್ನಡ ಶಾಲೆಯ ಎಲ್ಲಾ ಮಕ್ಕಳಿಗೂ, ಪೋಷಕರಿಗೂ, ಶಿಕ್ಷಕರಿಗೂ, ವ್ಯವಸ್ಥಾಪಕರಿಗೂ ಮತ್ತು ಸ್ವಯಂಸೇವಕರಿಗೂ ನನ್ನ ಕೃತಜ್ಞತೆಗಳು ಮತ್ತು ಅಭಿನಂದನೆಗಳು .



# ಆರೋಗ್ಯ ಬೃಂದಾವನ



ಅರ್ಚನಾ ಆಚಾರ್ಯ

ಆರೋಗ್ಯವೇ ಭಾಗ್ಯ ಎಂಬ ಗಾದೆಮಾತನ್ನು ಶಾಲೆಯಲ್ಲಿರುವಾಗ ಪ್ರಬಂಧ, ಭಾಷಣ ಸ್ಪರ್ಧೆಗಳ ವಿಷಯವನ್ನಾಗಿ ಆರಿಸಿ, ಭಾಷಣ ಮಾಡಿದ್ದೇ ಮಾಡಿದ್ದು, ಪುಟಗಟ್ಟಲೆ ಪ್ರಬಂಧಗಳ ಬರೆದದ್ದೇ ಬರೆದದ್ದು.

*Fast forward to real life.....* ದಿನನಿತ್ಯದ ಚಟುವಟಿಕೆಗಳು, ಕೆಲಸ, ಸಂಸಾರ ಎಂದು ಕಾಲಕ್ರಮೇಣ, *'we are invincible'* ಎನ್ನುವ ಭ್ರಮೆಯಲ್ಲಿ, ಆರೋಗ್ಯದ ಕಡೆ, ನಮ್ಮ ಅನುಕೂಲಕ್ಕೆ ತಕ್ಕಂತೆ, ಕಾಳಜಿ ವಹಿಸಿಯೋ, ವಹಿಸದೆಯೋ ಮುಂದುವರಿಸುತ್ತಾ ಬಂದಿದ್ದೆವು.

ಇದೇ ಸಮಯದಲ್ಲಿ, ಬೃಂದಾವನದ ಸಕ್ರಿಯ ಸದಸ್ಯರಾದ, ಸಹೃದಯಿ ಸಂತೋಷ್ ಕುಮಾರ್ ಕಡ್ಲೆಬೇಳೆಯವರು, ಹೃದ್ರೋಗ ಸಂಬಂಧಿತ ಕಾರಣಗಳಿಂದ ವಿಧಿ ವಶರಾದರು. ವಾಟ್ಸಾಪ್ ಗುಂಪುಗಳಲ್ಲಿ, ಮನೆಮನೆಗಳಲ್ಲಿ ಒಂದೇ ಸಂಭಾಷಣೆ - ನಾವೆಲ್ಲ ಇಂತಹ ಅನಿರೀಕ್ಷಿತ ಸಂದರ್ಭಗಳಲ್ಲಿ ಏನು ಮಾಡಬಹುದು, ತುರ್ತು ಚಿಕಿತ್ಸೆಗಳೇನು..., ಸಾಕಷ್ಟು ವಿಚಾರ-ವಿನಿಮಯ ಆದವು. ಆದರೆ ಇವೆಲ್ಲವನ್ನು ನಮಗೆ ವೈದ್ಯರಲ್ಲದೇ ಬೇರೆ ಯಾರೂ ಸ್ಪಷ್ಟವಾಗಿ ತಿಳಿಸಲಾರರು ಎನ್ನುವ ದೃಷ್ಟಿಯಿಂದ, ಬೃಂದಾವನ ಕನ್ನಡ ಕೂಟ, ಸಂತೋಷ್ ಕುಮಾರ್ ಕಡ್ಲೆಬೇಳೆಯವರ ನೆನಪಿನಲ್ಲಿ **'ಆರೋಗ್ಯ ಬೃಂದಾವನ'**ವನ್ನು ನಮ್ಮೆಲ್ಲರಿಗೂ ಪರಿಚಯಿಸಿ, ಆರೋಗ್ಯದ ಬಗ್ಗೆ ತಿಳುವಳಿಕೆ ಪಡೆಯಲು, ನಮ್ಮದೇ ಆದ ವೇದಿಕೆಗೆ ಅನುವು ಮಾಡಿಕೊಟ್ಟರು. ಸದಾ ಸಹಾಯಹಸ್ತ ಚಾಚುತ್ತಿದ್ದ, ಸಂತೋಷ್ ಕುಮಾರ್ ಕಡ್ಲೆಬೇಳೆಯವರ, ಸ್ಮರಣಾರ್ಥ, ಮೇ ೫ ೨೦೧೯ ರಂದು, ವಿಜಯಪ್ರಕಾಶ್ ಸಂಗೀತ ಸಂಜೆ ಆರಂಭವಾಗುವ ಮುನ್ನ, ಬೃಂದಾವನ ಅಧ್ಯಕ್ಷ ಶ್ರೀ ಸತೀಶ್ ಹೊಸನಗರ ಅವರ ನೇತೃತ್ವದಲ್ಲಿ, ಉದ್ಘಾಟನೆಗೊಂಡಿತು. ಈ ವೇದಿಕೆಯಲ್ಲಿ, ಶ್ವಾಸಕೋಶ ತಜ್ಞ(pulmonologist) ಡಾ|ರಾಮ್ ಬೆಂಗಳೂರು, ಹೃದ್ರೋಗ ತಜ್ಞೆ(cardiologist) ಡಾ| ಸುಭಾಷಿಣಿ ಗೌಡ ಹಾಗೂ ವಿಕಿರಣ ತಜ್ಞೆ (radiologist) ಡಾ|ಮಮತಾ ರಮೇಶ್ ಅವರು ಹೃದಯ ಸ್ವಾಸ್ಥ್ಯ, ಹೃದಯ ಸಂಬಂಧಿ ಖಾಯಿಲೆಗಳು, ರೋಗನಿರ್ಣಯ ಪರೀಕ್ಷೆಗಳನ್ನು, ಆಸ್ಪತ್ರೆ, ಕ್ಲಿನಿಕ್ ಗಳಲ್ಲಿ ಮಾಡುವ ಉದ್ದೇಶ, ತುರ್ತುಚಿಕಿತ್ಸೆಯ ಬಗ್ಗೆ ವಿವಾರಣಾತ್ಮಕವಾಗಿ ಮನದಟ್ಟು ಮಾಡಿದರು.

*ಹೈಟ್ಸ್ ಟೌನ್ ಹೈಸ್ಕೂಲ್ [HHS] ಆಡಿಟೋರಿಯಮ್‌ನಲ್ಲಿ ನೆರೆದಿದ್ದ ಆಸಕ್ತರನ್ನು ನೋಡಿದರೆ, ಒಂದೆಡೆ ಇತ್ತೀಚೆಗೆ ಜನಪ್ರಿಯವಾದ ಘೋಷಣೆ*

*#HowIsTheJoshHighSir ನೆನಪಾದರೆ*

*ಕೆಲವರು **HHS** ಎಂದರೇ ಹಾರ್ಟ್ ಹೆಲ್ತ್ ಸಿಂಪೋಸಿಯಮ್' ಎಂದು ಹೇಳುವಂತಿತ್ತು.*

ಆ ದಿನದ ಪರಸ್ಪರ ವಿಚಾರ-ವಿನಿಮಯದ ಸಂಕ್ಷಿಪ್ತ ತಿಳುವಳಿಕೆ ಇಂತಿದೆ.

1. ದಿನನಿತ್ಯದ ಚಟುವಟಿಕೆಗಳನ್ನು ನಡೆಸಲು ಸಹಾಯ ಮಾಡುವ ಶರೀರದ ಮುಖ್ಯ ಅಂಗವೇ ಹೃದಯ. ರಕ್ತನಾಳಗಳು ಮತ್ತು ಹೃದಯದ ಮೇಲೆ ಪರಿಣಾಮ ಬೀರುವ ತೊಂದರೆಗಳನ್ನು ಹೃದ್ರೋಗ ಎಂದು ಕರೆಯುತ್ತಾರೆ. ಇವುಗಳಲ್ಲಿ, ಪರಿಧಮನಿಯ ಹೃದ್ರೋಗಗಳು(*coronary heart diseases*), ಮಿದುಳು ರೋಗಗಳು (*cerebrovascular diseases*), ರಕ್ತಕೊರತೆಯಹೃದಯ ರೋಗಗಳು(*periheral artery disease*) ಇತ್ಯಾದಿ ವಿಧಗಳಿವೆ.
2. ಹೃದಯಕ್ಕೆ ರಕ್ತ ಪೂರೈಸಲು ನಾಳ(*veins*) / ಅಪಧಮನಿಯ (*arteries*) ಗೋಡೆಗಳ ಮೇಲೆ ಅತ್ಯಧಿಕ ಪ್ರಮಾಣದಲ್ಲಿ ಕೊಬ್ಬು, ಕ್ಯಾಲ್ಸಿಯಂ ಹಾಗೂ ಜೀವಕೋಶಗಳ ತ್ಯಾಜ್ಯ ತುಂಬಿಕೊಂಡು, ರಕ್ತಸಂಚಲನಕ್ಕೆ ಅಡ್ಡಿಯಾಗಿ, ರಕ್ತದೊತ್ತಡ ಹೆಚ್ಚಾಗಿ, ದೇಹಕ್ಕೆ ಬೇಕಾಗುವಷ್ಟು ಆಮ್ಲಜನಕ ಸಿಗದೇ, ಹೃದಯಾಘಾತಕ್ಕೀಡಾಗುವ ಸಾಧ್ಯತೆ ಇದೆ (ಶರೀರ

ದಲ್ಲಿ ಹರಿಯುತ್ತಿರುವ ರಕ್ತವು, ರಕ್ತನಾಳಗಳ ಗೋಡೆಯ ಮೇಲೆ ಹಾಕುವ ಒತ್ತಡಕ್ಕೆ ರಕ್ತದೊತ್ತಡ ಎನ್ನುತ್ತಾರೆ).

3. ಇಷ್ಟಲ್ಲದೇ, ಕೆಲವೊಮ್ಮೆ, ರೋಗಿಗೆ ಯಾವುದೇ ತೊಂದರೆ ಕಾಣಿಸುವು ಛಾದಿಲ್ಲ. ಅದು ಸದ್ದಿಲ್ಲದ ಹೃದಯಾಘಾತ (*silent attack*).
4. ಅಸಾಮಾನ್ಯವಾದ ಈ ಕೆಲವು ಲಕ್ಷಣಗಳು ಕಂಡುಬಂದಲ್ಲಿ, ಎಚ್ಚರಿಕೆ- ಉಸಿರುಗಟ್ಟಿದಂತೆ ಆಗುವುದು, ಎದೆ, ಗಂಟಲು, ದವಡೆಯಲ್ಲಿ ಉರಿಯೂತ, ಎದೆ ಭಾರ, ವಾಕರಿಕೆ, ಅಸಾಮಾನ್ಯ ಆಯಾಸ, ಕೆಮ್ಮು, ಅತಿಯಾದ ಬೆವರು.
5. ಮೊಟ್ಟಮೊದಲಿಗೆ 911 ಕರೆ ಮಾಡಿ.CPR (ಹೃದಯ ಮತ್ತು ಶ್ವಾಸಕೋಶ ಪ್ರಚೋದಕ) ತರಬೇತಿ ಪಡೆದಿದ್ದಲ್ಲಿ, ಅಂಬ್ಯುಲನ್ಸ್ ಬರುವವರೆಗೆ ರೋಗಿಗೆ,CPR ನಿರ್ವಹಿಸಿ.
6. ಹೃದ್ರೋಗದ ಸಮಸ್ಯೆ ಹೆಚ್ಚಾಗುವುದನ್ನು ನಿಯಂತ್ರಿಸಬಹುದು. ಅದಕ್ಕಾಗಿ, ಮುಖ್ಯವಾಗಿ, ನಮ್ಮ ಜೀವನಶೈಲಿಯನ್ನು ಬದಲಾಯಿಸಿಕೊಳ್ಳುವುದು ಅನಿವಾರ್ಯ. ಕೆಲವು ಸೂಚನೆಗಳು:
   - ◊ ಧೂಮಪಾನ ಹಾಗೂ ಮದ್ಯಪಾನ ಸೇವನೆಯ ಚಟವನ್ನು ಬಿಡುವುದು.
   - ◊ ಪ್ರತಿದಿನ ಕನಿಷ್ಠ 30 ನಿಮಿಷವನ್ನು ದೈಹಿಕ ವ್ಯಾಯಾಮಕ್ಕೆ ಮೀಸಲಿಡುವುದು.
   - ◊ ಆರೋಗ್ಯಭರಿತ/ಪೌಷ್ಟಿಕ ಆಹಾರ ಸೇವಿಸುವುದು.
   - ◊ ದೇಹದ ತೂಕವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು.
   - ◊ ನಿಮ್ಮ ದಿನಚರಿಯಲ್ಲಿ stress ಕಡಿಮೆ ಮಾಡಿ; ಕೆಲಸದ ಮಧ್ಯೆ ಸಣ್ಣ, ಸಣ್ಣ, ವಿರಾಮದ ಅವಧಿಗಳನ್ನು ಅಳವಡಿಸಿ.
   - ◊ ಮಧುಮೇಹ, ಥೈರಾಯ್ಡ್ ಸಮಸ್ಯೆ, ಅಧಿಕ ಕೊಲೆಸ್ಟ್ರಾಲ್, ಅಧಿಕ ರಕ್ತದೊತ್ತಡ, ಇತ್ಯಾದಿ ರೋಗರುಜಿನಗಳನ್ನು, ನಿಯಂತ್ರಣದಲ್ಲಿಟ್ಟುಕೊಳ್ಳಿರಿ.
   - ◊ ಗೂಗಲ್-ಡಾಕ್ಟರನ ಸಲಹೆ ಪಡೆಯದೆ, ನಿಯಮಿತ ಆರೋಗ್ಯ ತಪಾಸಣೆ ಹಾಗೂ ನಿಮ್ಮ ಕುಟುಂಬ-ವೈದ್ಯರ ಸಲಹೆಗಳನ್ನು ಅನುಸರಿಸಿ.
   - ◊ ಅಂತೆಯೇ, ಸಾಧ್ಯವಾದ್ದಲ್ಲಿ, ಕುಟುಂಬಕ್ಕೆ ಆರ್ಥಿಕ ನೆರವಾಗುವ ಸಲುವಾಗಿ, ಜೀವವಿಮಾ ಕಾರ್ಯಕರ್ತರನ್ನು ಸಂಪರ್ಕಿಸಿ.

*ನಮಾಮಿ ಧನ್ವಂತರಿಯಾದಿ ದೇವಂ; ಸುರಾಸುರೈರವಂದಿತ ಪಾದಪದ್ಮಮ್।*
*ಲೋಕೈರ್ಜರಾಋಗ್ಭಯ ಮೃತ್ಯುನಾಶಮ್; ಧಾತಾರಮೀಷಮವಿವಿಧೌಷದಿ ನಾಮ್॥*

ಈ ಶ್ಲೋಕದೊಂದಿಗೆ, ಧನ್ವಂತರಿಯನ್ನು ನಿತ್ಯ ಪ್ರಾರ್ಥಿಸಿ ಕಾರ್ಯ ಆರಂಭಿಸಿದರೆ, ದಿನವಿಡೀ ಚೈತನ್ಯಪೂರ್ಣತೆ ಉಳಿಯುತ್ತದೆ ಎಂದು ಆಯುರ್ವೇದ ಶಾಸ್ತ್ರದಲ್ಲಿ ಹೇಳಲಾಗಿದೆ.

# ಅಮ್ಮಾ



ಶ್ರೀವಿದ್ಯಾ ಪ್ರಶಾಂತ್

ನಿನ್ನ ಒಡಲ ಕುಡಿ ನಾನು
ಮಮತೆಯ ಸೆಲೆ ನೀನು..
ಕಮರಿದ ಲತೆಗೆ ಜೀವತುಂಬುವ
ಸ್ವಾತಿ ಮಳೆಯೇ ನೀನು..
ನಿನ್ನ ಮಡಿಲಲಿ ಅರಳಿದ
ಸುಮ ನಾನು.


ಭರವಸೆಯ ಮೂರುತಿಯೇ
ಸಂಸಾರವೆಂಬ ರಥದ ಸಾರಥಿಯೇ..
ಮನೆಯೆಂಬ ದೇಗುಲದ ದೇವತೆಯೇ..
ಈ ಬಾಳ ಬೆಳಗೋ ಪರಂಜ್ಯೋತಿಯೇ...

ಅಮ್ಮಾ...ನಿನ್ನ ತ್ಯಾಗಕ್ಕೆ ಎಣೆಯುಂಟೇ...?
ನಿನ್ನ ಕರುಣೆಗೆ ಪರಿಯುಂಟೇ...?
ನೀನಿರದೆ ನಾನಿಲ್ಲ
ನಿನ್ನಿಂದಲೇ ಈ ಜಗವೆಲ್ಲಾ.

ಚಿತ್ರ: ಸಾರ್ಥಕ್ ರಾವ್, ೧೧ ವರ್ಷ



# ಪ್ರಬಂಧ—ಶ್ರೀ ಕುವೆಂಪು ಅವರ ನಾಟಕಗಳು ಮತ್ತು ಪಾತ್ರಗಳ ವೈಶಿಷ್ಟ್ಯ



**ಕೆ ಎನ್ ನಳಿನಾಕ್ಷಮ್ಮ,** *ಮೈಸೂರು*

ಕುವೆಂಪುರವರು ತಮ್ಮ ಸಾಹಿತ್ಯ ಕೃಷಿಯನ್ನು ಅವರು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಆರಂಭಿಸಿದರು. ಬಹುಮಟ್ಟಿಗೆ ಇಂಗ್ಲಿಷ್ ಭಾಷೆಯೇ ಮೆರೆಯುತ್ತಿದ್ದ ಕಾಲ ಅದಾಗಲೇ ಬಂದಿತ್ತು.ಬುದ್ಧಿ ಜೀವಿಗಳೆಲ್ಲ ಇಂಗ್ಲೀಷನ್ನು ವ್ಯವಸ್ಥಿತವಾಗಿ ಕಲಿಯುತ್ತಿದ್ದರು. ಕನ್ನಡದ ಕೆಲವು ಹಿರಿಯ ಸಾಹಿತಿಗಳೂ ಸಹ ಇಂಗ್ಲಿಷಿನಲ್ಲಿಯೇ ತಮ್ಮ ಸಾಹಿತ್ಯ ಕ್ಷೇತ್ರವನ್ನು ಆರಂಭಿಸಿದ್ದರು. ಕುವೆಂಪುರವರೂ ಸಹ ಇಂಗ್ಲೀಷ್ ಭಾಷೆಯ ಪ್ರಭುತ್ವ ಸಾಧನೆಯ ದಾರಿ ಹಿಡಿದಿದ್ದರು. ಅವರು ಮಿಲ್ಟನ್ ಹಾಗೂ ವರ್ಡ್ಸ್‌ವರ್ತ್ ಕವಿಗಳಿಂದ ಪ್ರಭಾವಿತರಾಗಿ ತಮ್ಮ ಹದಿನೆಂಟನೇ ವಯಸ್ಸಿನಲ್ಲಿಯೇ ಇಂಗ್ಲಿಷ್ ಭಾಷೆಯ ಒಂದು ಕವನ ಸಂಕಲನವನ್ನು ಪ್ರಪ್ರಥಮವಾಗಿ ಪ್ರಕಟಿಸಿದರು(೧೯೨೨). ಅದರ ಹೆಸರು "ಬಿಗಿನರ್ಸ್ ಮ್ಯೂಸ್" (*Beginner's Muse* ) . ಏಳು ಕವಿತೆಗಳಿರುವ ಈ ಸಂಕಲನದಲ್ಲಿ ಎರಡು ಮಿಲ್ಟನ್ ಕವಿಯ ಮತ್ತು ಮೂರು ವರ್ಡ್ಸ್‌ವರ್ತ್ ಕವಿಯ ಕವಿತೆಗಳ ಅನುಕರಣೆಗಳು. ಇದನ್ನು ಓದಿದ ಕುವೆಂಪುರವರ ಗೆಳೆಯರ ಬಳಗ ಮೆಚ್ಚಿ ತಲೆದೂಗಿ, ಹೊಗಳಿ ಕೊಂಡಾಡಿದರು.

**ಕಸಿನ್ಸ್ ಭೇಟಿ –ಕನ್ನಡದೆಡೆಗೆ ತಿರುವು –** ಇದೇ ಸಮಯದಿ ಮೈಸೂರಿಗೆ ಭೇಟಿ ಇತ್ತ ಐರಿಷ್ ಕವಿ "ಜೆ ಹೆಚ್ ಕಸಿನ್ಸ್" ಅವರಿಗೆ ಕುವೆಂಪುರವರು ಈ ಕವನ ಸಂಕಲನವನ್ನು ತೋರಿಸಿದರು. ಕಸಿನ್ಸ್ ಅವರು ಸಮಾಧಾನದಿಂದಲೇ ಈ ಕವಿತೆಗಳನ್ನು ಓದಿದರಾದರೂ, ಕೊನೆಗೆ ಕುವೆಂಪುರವರಿಗೆ ಒಂದು ಕಿವಿ ಮಾತನ್ನು ಹೇಳಿದರು. "ಕನ್ನಡ ನಾಡಿನ ಕವಿಯಾದ ನೀವು ಕನ್ನಡದಲ್ಲೇ ಬರೆದರೆ ಹೆಚ್ಚು ಪ್ರಭಾವಿಯಲ್ಲವೇ" ಎಂದು. ಕುವೆಂಪುರವರ "ಇದು ಸಾಧ್ಯವೇ?" ಎಂಬ ಪ್ರಶ್ನೆಗೆ ಕಸಿನ್ಸ್ ರವರು – "ಸಾಧ್ಯವಾಗಲೇ ಬೇಕು. ನಿಮ್ಮ ಮಾತೃಭಾಷೆಯೇ ನಿಮಗೆ ಮೇಲು" ಎಂದು ಹೇಳಿದರು. ಜತೆಗೆ, "ರವೀಂದ್ರನಾಥ್ ಠಾಗೋರರು ಇಂಗ್ಲೀಷಿನಲ್ಲಿ ಬರೆಯುವರೋ ಅಥವಾ ಅವರ ಮಾತೃ ಭಾಷೆ ಬಂಗಾಳಿಯಲ್ಲೋ ?" ಎಂದು ಕೇಳಿದಾಗ ಕುವೆಂಪುರವರಿಗೆ ಕಸಿನ್ಸ್ ರವರ ಮಾತಿನ ಮಹತ್ವದ ಅರಿವಾಗಿರಬೇಕು. ಆ ಕ್ಷಣದಿಂದಲೇ ಅವರು ಕನ್ನಡದಲ್ಲಿ ತಮ್ಮ ಬರವಣಿಗೆಯ ಕೃಷಿಯನ್ನು ಆರಂಭಿಸಿದರು. ಆ ಕಾಲದಲ್ಲಿ ಕನ್ನಡದಲ್ಲಿ ಬರೆಯುವುದೇ ಒಂದು ಕ್ರಾಂತಿ–ಕಾರಕ ಸಂಗತಿಯಾಗಿತ್ತು. ಇಂತಹ ಸಂದಿಗ್ಧತೆಯನ್ನು ಎದುರಿಸುತ್ತಲೇ ಕುವೆಂಪುರವರು ೧೯೨೪ರಲ್ಲಿ ತಮ್ಮ ಮೊದಲ ಕನ್ನಡ ಕೃತಿ "ಅಮಲನ ಕಥೆ" ಯನ್ನು ಪ್ರಕಟಿಸಿದರು. ಚೌಪದಿಗಳ ಕಥನ-ಕವನವಾದ "ಅಮಲನ ಕಥೆ"ಯಲ್ಲಿ ಒಟ್ಟು ೧೯೦ ಚೌಪದಿಗಳಿವೆ. ಜನಪ್ರಿಯ ಪುಣ್ಯಕೋಟಿಯ ಹಾಡಿಗೂ ಈ ಅಮಲನ ಕಥೆಗೂ ಸಾಮ್ಯತೆ ಇದೆ. - ಪುಣ್ಯಕೋಟಿ ಸತ್ಯವೇ ದೇವರೆಂದು ಹುಲಿಗೆ ಭಾಷೆ ಕೊಡುತ್ತದೆ. ಇಲ್ಲಿ ಅಮಲ ಎಂಬ ಬಾಲಕ ಜಿಂಕೆಗೆ ನಿನ್ನನ್ನು ಬದುಕಿಸುತ್ತೇನೆ, ಬದಲಿಗೆ ನನ್ನ ಪ್ರಾಣವನ್ನು ಬಲಿ ಕೊಡುತ್ತೇನೆ ಎಂದು ಮಾತು ಕೊಡುತ್ತಾನೆ. - ಇಲ್ಲಿ ಇಬ್ಬರೂ ಮಾತಿಗೆ ತಪ್ಪುವುದಿಲ್ಲ. ಅದೇ ಸಮಯದಲ್ಲಿ ಕುವೆಂಪುರವರು ಕೆಲವು ಹೆಸರಾಂತ ಇಂಗ್ಲೀಷ್ ಕವಿತೆಗಳನ್ನು ಕನ್ನಡವೇ ಮೈವೆತ್ತಂತೆ ಭಾಷಾಂತರಿಸಿದರು. ಅವುಗಳಲ್ಲಿ - "ಬೊಮ್ಮನಹಳ್ಳಿ ಕಿಂದರಿಜೋಗಿ" ಮತ್ತು "ಹಾಳೂರು" ಕವನಗಳು ಹೆಸರುವಾಸಿ.

**ಕುವೆಂಪುರವರ ನಾಟಕಗಳು:** ಹೀಗೆ ಸಾಹಿತ್ಯಿಕ ಜೀವನದ ಪ್ರಾರಂಭಿಸಿದ ಕುವೆಂಪುರವರು, ಮೊದಲಲ್ಲಿ ತಮ್ಮ ಸೃಜನಶೀಲ ಪ್ರತಿಭೆ, ಸಾಹಿತ್ಯ ಕೃಷಿಯನ್ನು ನಾಟಕ ಪ್ರಕಾರದಲ್ಲಿ ತೊಡಗಿಸಿಕೊಂಡರು ಎಂದರೆ ಉತ್ಪ್ರೇಕ್ಷೆಯಲ್ಲ.ಕೊಳಲು ಕುವೆಂಪು ಅವರ ಮೊದಲ ಕನ್ನಡ ಸಂಕಲನವಾದರೂ, ಕೊಳಲು ಪ್ರಕಟವಾಗುವ ಮುನ್ನವೇ ಅವರು ಹಲವಾರು ನಾಟಕಗಳನ್ನು ಬರೆದಿದ್ದರು. ಕುವೆಂಪುರವರು ಒಟ್ಟು ಹದಿನಾಲ್ಕು ನಾಟಕಗಳನ್ನು ಬರೆದಿದ್ದಾರೆ.

ಈ ಲೇಖನದಲ್ಲಿ ನಾನು ಕುವೆಂಪುರವರ ನಾಟಕಗಳ, ಅದರಲ್ಲಿ ಬರುವ ಪಾತ್ರಗಳ ವಿಶ್ಲೇಷಣೆ ಮಾಡಲು ಪ್ರಯತ್ನಿಸಿದ್ದೇನೆ.

ಕುವೆಂಪುರವರು ಬರವಣಿಗೆಯನ್ನು ಆರಂಭಿಸಿದ ಸಂದರ್ಭದಲ್ಲಿ ಮೈಸೂರಿನಲ್ಲಿ ಪ್ರಭಾವಿ ವಿದ್ವಾಂಸರ ಸಮೂಹವಿತ್ತು. ಪ್ರಧಾನಧಾರೆಯ ಸಂಸ್ಕೃತಿಯಿಂದ ಬಂದ ಈ ಸಮೂಹದ ಮುಂದೆ, ಅವೈದಿಕ ಪರಂಪರೆಯಿಂದ ಬಂದ ಕುವೆಂಪುರವರು ಸಾಹಿತ್ಯ ರಚನೆಗೆ ತೊಡಗಿ ಮಾನ್ಯತೆ ಗಳಿಸಿಕೊಳ್ಳುವುದು ಒಂದು ಸವಾಲೇ ಆಗಿತ್ತು. ಕುವೆಂಪುರವರು ಈ ಸವಾಲುಗಳನ್ನು ಸಮರ್ಪಕವಾಗಿ ಎದುರಿಸಿ ತಮ್ಮ ಸಾಹಿತ್ಯ ಕ್ಷೇತ್ರದ ಉಜ್ವಲ ಅಧ್ಯಾಯದ ಬಾಗಿಲನ್ನು ತಾವೇ ತೆರೆದುಕೊಂಡರು. ಇಂತಹ ಪ್ರತಿಭೆ ಆ ದಿನಗಳಲ್ಲಿ ಮತ್ತೊಂದು ಇರಲಿಲ್ಲವೆನ್ನಬಹುದು. ಇವರ ನಾಟಕಗಳಲ್ಲಿ ಇವರ ಹಿನ್ನೆಲೆಯ ಹೋರಾಟವೂ ದನಿಯಾಗಿರುತ್ತದೆ ಎಂಬುದು ನನ್ನ ಅಭಿಮತ.

ಕುವೆಂಪುರವರು ತಮ್ಮ ಮೊದಲ ನಾಟಕ "ಮೋಡಣ್ಣನ ತಮ್ಮ" ಪ್ರಕಟಿಸಿದ್ದು ೧೯೨೬ ರಲ್ಲಿ. ಅದಾಗಲೇ ಕೈಲಾಸಂ ಹಾಗೂ ಶ್ರೀ ರಂಗ ರವರೂ ನಾಟಕ ರಚನೆಯಲ್ಲಿ ತೊಡಗಿದ್ದರು. ಪಾಶ್ಚಾತ್ಯ ರಂಗಭೂಮಿಯ ಪರಿಚಯವಿದ್ದ ಇವರುಗಳು ಅಂದಿನ ರಂಗಭೂಮಿಗೆ ಬದಲಾವಣೆಯನ್ನು ತರುವ

ಪ್ರಯತ್ನದಲ್ಲಿದ್ದರು. ಇದೇ ಸಂದರ್ಭದಲ್ಲಿ ರಂಗ ಪ್ರವೇಶ ಮಾಡಿದ ಕುವೆಂಪುರವರು, ಕೈಲಾಸಂ ಮತ್ತು ಶ್ರೀರಂಗರಿಗಿಂತ ಭಿನ್ನ ರೀತಿಯಲ್ಲಿ ನಾಟಕವನ್ನು ರಚಿಸಲು ಯೋಚಿಸಿದರು. ಈ ಚಿಂತನೆಯ ಫಲಶ್ರುತಿಯೇ ಕುವೆಂಪುರವರ ಎರಡನೆಯ ನಾಟಕ 'ಯಮನ ಸೋಲು '.ಹೀಗೆ ಕುವೆಂಪುರವರು ಇತರರ ನಾಟಕಗಳ ಬಗ್ಗೆ ಚಿಂತಿಸಿ ಅದಕ್ಕಿಂತ ವಿಭಿನ್ನವಾದ ನಾಟಕಗಳನ್ನು ಸೃಷ್ಟಿಸಿ ನಾಟಕ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನೇ ನೀಡಿದರು.

ನಾಟಕಗಳಲ್ಲಿ ಅಪ್ರಾಸ ಛಂದಸ್ಸು ಇನ್ನೂ ಪ್ರಯೋಗಗೊಂಡಿರದ ಕಾಲದಲ್ಲಿ ಕುವೆಂಪುರವರು ಅಪ್ರಾಸ ಛಂದಸ್ಸನ್ನು ನಾಟಕಗಳಲ್ಲಿ ಅಳವಡಿಸಿದರು. ಇವರ ನಾಟಕಗಳಾದ 'ಯಮನ ಸೋಲು' ಮತ್ತು 'ಬಿರುಗಾಳಿ ' ಎಂಬ ನಾಟಕಗಳಿಗೆ ಮುನ್ನುಡಿ ಬರೆಯುತ್ತಾ ಪ್ರೊಫೆಸರ್ ವೆಂಕಣ್ಣಯ್ಯನವರು ಅಪ್ರಾಸ ಛಂದಸ್ಸಿಗೆ 'ಸರಳ ರಗಳೆ ' ಎಂದು ನಾಮಕರಣ ಮಾಡಿದರಂತೆ. ಕುವೆಂಪು ಅವರೇ ಹೇಳುತ್ತಾರೆ – *"ಮೊದಲೇ ಸಿದ್ಧವಾಗಿದ್ದ ಸರಳ ರಗಳೆಯನ್ನು ನಾಟಕಕ್ಕೆ ಬಳಸಿಕೊಳ್ಳುವುದರಲ್ಲಿ ಅಷ್ಟೇನೂ ಹೆಚ್ಚುಗಾರಿಕೆಯಿಲ್ಲ. ಆದರೆ ಕಥನಕ್ಕೆ ಒಗ್ಗುವ ಸರಳ ರಗಳೆ ಹಾಗೆ ಹಾಗೆಯೇ ನಾಟಕಕ್ಕೆ ಸರಿ ಹೊಂದುವುದಿಲ್ಲ - ನಾಟಕವು ಸಂವಾದ ಪ್ರಧಾನ , ಮಹಾಕಾವ್ಯ ಕಥನ ಪ್ರಧಾನ. ಆದ್ಧರಿಂದ ಉದಾತ್ತ ವಸ್ತು ಕಥನಕ್ಕೆ ಬೇಕಾದ ಭಾಷೆಯ , ಛಂದಸ್ಸಿನ ಮತ್ತು ಲಯದ ಬೀಸು , ಸಂವಾದವೇ ಮುಖ್ಯವಾಗಿರುವ ನಾಟಕಕ್ಕೆ ತಿಳಿಸುವುದಿಲ್ಲ. ಅಲ್ಲದೆ ಛಂದಸ್ಸಿನ ಲೆಕ್ಕಾಚಾರವೂ ಆಡುವ ಮಾತಿನ ಭಾಷೆಗೂ , ಓದಿ ವಾಚನ ಮಾಡುವ ಭಾಷೆಗೂ ವ್ಯತ್ಯಸ್ತವಾಗುತ್ತದೆ. ನಾಟಕದ ಸಂವಾದದ ಛಂದಸ್ಸು ಅರ್ಧ ಪಂಕ್ತಿಯಲ್ಲೂ ನಿಲ್ಲಬಹುದು. ಕಾಲು ಪಂಕ್ತಿಯಲ್ಲೂ ನಿಲ್ಲಬಹುದು , ಒಂದು ಎರಡು ಮೂರು ಪಂಕ್ತಿಗಳವರೆಗೂ ವಿಸ್ತರಿಸಬಹುದು. ಒಮ್ಮೆಮ್ಮೆ ಐದು ಮಾತ್ರೆಯ ಸ್ಥಾನದಲ್ಲಿ ಮೂರ್ ಮಾತ್ರೆಗಳು ನಿಲ್ಲಬೇಕಾಗುತ್ತದೆ. ಇನ್ನೊಮ್ಮೆ ಒಂದು ಪ್ಲುತವೇ ಒಂದು ಇಡೀ ಗಣದ ಸ್ಥಾನವನ್ನು ಆಕ್ರಮಿಸುವುದೂ ಉಂಟು. ಅಲ್ಲದೆ ನಾಟಕೀಯವಾದ ಸಂವಾದದ ಮತ್ತು ಅಭಿನಯದ ಭಾಷೆ ಕಥನ ರೀತಿಯ ' ರಗಳೆಯತನ ' ದಿಂದ ಪ್ರಯತ್ನಪೂರ್ವಕಾಗಿ ಬಿಡಿಸಿಕೊಂಡು ಪಾರಾಗಿ ನಿಲ್ಲಬೇಕಾಗುತ್ತದೆ. ಆದಕ್ಕಾಗಿ ನಿಲ್ದಾಣಗಳನ್ನು ಅಥವಾ 'ಯತಿ ' ಸ್ಥಾನಗಳನ್ನು ಕಲ್ಪಿಸಬೇಕಾಗುತ್ತದೆ. ಏಕತಾನತೆಯ ಅಥವಾ ಏಕರೂಪತೆಯ ಬೇಸರ (ರಗಳೆತನ ) ಒದಗದ ಹಾಗೆ. ಅಂತೂ ಇಂತೂ ಮುಂದೆ ಕೆಲವರ್ಷಗಳಲ್ಲಿ ಕಾವ್ಯಕ್ಕೆ ಮಹಾ ಛಂದಸ್ಸಾಗಿಯೂ ನಾಟಕಕ್ಕೆ ನಾಟ್ಯ ಛಂದಸ್ಸಾಗಿಯೂ ಪರಿವರ್ತಿತವಾಗುವ ವಿಕಾಸದ ಹಾದಿಯಲ್ಲಿ ' ರಗಳೆ ' ಯು ಅಪ್ರಾಸ ಛಂದಸ್ಸಿನ ಸರಳ ರಗಳೆಯಾಗಿ ನನ್ನ ಮೊದಲ ನಾಟಕವಾದ 'ಜಲಗಾರ'ದಲ್ಲಿ ಕಣ್ ತೆರೆಯಿತು".* ಕುವೆಂಪುರವರ ಈ ಸುಧೀರ್ಘ ಹೇಳಿಕೆಯು ನಾಟಕ ರಚನೆಯ ಬಗ್ಗೆ ಅವರ ಚಿಂತನೆಯ ಸ್ವರೂಪವನ್ನು ನಮಗೆ ತಿಳಿಸುತ್ತದೆ. ಕುವೆಂಪುರವರ ಆಯ್ದ ನಾಟಕಗಳ ಬಗ್ಗೆ, ಪಾತ್ರಗಳ ಬಗ್ಗೆ ಈಗ ನೋಡೋಣ:

**ಮೋಡಣ್ಣನ ತಮ್ಮ (೧೯೨೬)**

**ಪಾತ್ರಗಳು-** ಹುಡುಗ, ಹುಡುಗನ ತಾಯಿ, ಮೋಡ, ಗಿರಿ, ಕಾಡು... ನಾಟಕ.

'ಮೋಡಣ್ಣನ ತಮ್ಮ' ಕುವೆಂಪು ಬರೆದ ಮೊದಲ ನಾಟಕ . ಇದು ಕೇವಲ ಹದಿನಾರು ಪುಟಗಳ ಪುಟ್ಟ ನಾಟಕ.'ಮೋಡಣ್ಣನ ತಮ್ಮ ' ಹಾಗೂ ' ನನ್ನ ಗೋಪಾಲ ' ಈ ಎರಡು ನಾಟಕಗಳನ್ನು ಕುವೆಂಪು ಬರೆದ ಮಕ್ಕಳ ನಾಟಕಗಳೆಂದು ಹೆಸರಿಸಲಾಗಿದೆ. ಮಕ್ಕಳೇ ಇಲ್ಲಿ ಪ್ರಧಾನ ಪಾತ್ರಗಳು . ಇಲಿ ್ಲಯ ವಸ್ತುವೂ ಮಕ್ಕಳನ್ನು ಉದ್ದೇಶಿಸಿದ್ದೇ ಆಗಿದೆ. ಈ ನಾಟಕಗಳು ಮಾತ್ರ ದೇವ್ರೋ ಭಾವ ಎಂಬ ವಾಣಿಯನ್ನೂ ನಿಷ್ಕಲ್ಮಶ ಪ್ರೀತಿಗೆ ದೇವರು ಒಲಿಯುತ್ತಾನೆ ಎಂಬುದನ್ನೂ ಸಾಕ್ಷೀಕರಿಸುವಂತಿವೆ. ಇದು ಎಳೆಯ ಮಕ್ಕಳಿಗೆ ಅರ್ಥವಾದರೆ ನಾಟಕವೂ ಧನ್ಯ ಕವಿಯ ಕಲ್ಪನೆಯೂ ಶ್ರಮವೂ ಸಾರ್ಥಕ. ಬಹಳ ಸ್ವಾರಸ್ಯವಾಗಿರುವ ಈ ನಾಟಕದಲ್ಲಿ ಪುಟ್ಟ ಹುಡುಗನಿಗೆ ಮೋಡದೊಡನೆ ಆಟವಾಡುವ ಆಸೆ. ಆದರೆ ಮೋಡ ಒಪ್ಪುವುದಿಲ್ಲ. ಮೋಡದ ಗೆಳೆಯರಾದ ಗಿರಿ ಕಾಡುಗಳ ಬಳಿ ಶಿಫಾರಸ್‌ಗೆ ಕೋರುತ್ತಾನೆ. ಆದರೂ ಮೋಡ ಒಪ್ಪುವುದಿಲ್ಲ. ಬದಲಾಗಿ ಹುಡುಗನಿಗೆ ಮೋಡ ಬುದ್ದಿ ಮಾತು ಹೇಳುತ್ತದೆ.

***ಮೋಡ:*** ಬರಬೇಡಣ್ಣಾ ಬರಬೇಡಣ್ಣ
ಅವ್ವನು ಬಯ್ಯುವಳು ನೀ ನೋಡಣ್ಣ ....
ಅತ್ತರೆ ನಿನ್ನನ್ನು ಸಂತಸ ಪಡಿಸಲು
ಹೆತ್ತವರಿಲ್ಲದೆ ಆಗದು ಅಣ್ಣಾ
..
ಗಿರಿಯು ಮೋಡಕ್ಕೆ ಶಿಫಾರಸ್ಸು ಮಾಡುತ್ತದೆ.
***ಮೋಡ:*** *ಎಲೆ ಗಿರಿಯಣ್ಣಾ ನಿನಗೇಕಣ್ಣಾ ?*
*ಕುಳಿತುಪದೇಶವ ಮಾಡುವೆಣ್ಣಾ*
..
***ಮೋಡ:*** ಯಾರೇ ಬೈದರೂ ಸೈರಿಸಿಕೊಳ್ಳುತ್ತೇನೆ.
ತಾಯಿಯ ಶಾಪವ ಸೈರಿದೆ ನಾನು !...

ತಾಯಿಯ ಮಹತ್ವವನ್ನು ಸಾರುವ ಈ ನಾಟಕವು ಮಕ್ಕಳ ಲಾಲನೆ ಪಾಲನೆ ತಾಯಿಯ ಹೊಣೆ ಎಂದೂ, ಮಕ್ಕಳು ತಾಯಿಯ ಮಾತನ್ನು ಕೇಳಬೇಕೆಂಬುದು ಸೂಚ್ಯವಾಗಿ ಹೇಳುತ್ತದೆ. ಕಾಡಿನ ಮಹತ್ವವನ್ನು ಸಾರುವ ಈ ನಾಟಕದಲ್ಲಿ, ಕಾಡು ಅಸಮಾಧಾನಗೊಂಡು, "ಕಡಿದರೆ ಹೊರತೂ ಬಂದವರೆಲ್ಲಾ , ನೆಡುವವರೊಬ್ಬರೂ ಕಾಣಲೇ ಇಲ್ಲಾ" .... ಎಂದು ಜನರಿಂದ ಪರಿಸರಕ್ಕೆ , ಕಾಡಿಗೆ ಆಗುತ್ತಿರುವ ತೊಂದರೆಯನ್ನು ವ್ಯಕ್ತಪಡಿಸುತ್ತದೆ . ನೊಂದ ಕಾಡಿನ ಈ ಮಾತುಗಳು ಎಲ್ಲರ ಅಂತರಂಗವನ್ನೂ ಕಲಕುವಂತಿದೆ. ಕಾಡಿನ ಮಾತುಗಳು ಪುಟ್ಟ ಹುಡುಗನಿಗೆ ಭಾರವೆನಿಸುತ್ತದಾದರೂ, ಆ ಎಳೆಯ ಹೃದಯದಲ್ಲಿ ಮರಗಳನ್ನು

ಕಡಿಯಬಾರದು ಎಂಬ ಅರಿವು ಅಚ್ಚಳಿಯದೆ ಉಳಿಯುತ್ತದೆ ಎನ್ನಬಹುದು. ಪ್ರಾರಂಭದಲ್ಲಿ ಖುಷಿಕೊಡುವ ನಾಟಕ ಅಂತ್ಯದಲ್ಲಿ ಚಿಂತನೆಗೆ ಹಚ್ಚುತ್ತದೆ.

**ಕವಿಯ ಆಶಯ** - ಹುಡುಗನೇ ಮುಂದೆ ಮೇಘದ ಪಾತ್ರವಾಗಬೇಕು. ಅದೂ 'ಧರ್ಮ ಮೇಘ' ಅವನು ಮುಂದೆ ಧರ್ಮ ಮಳೆಯನ್ನು ಸುರಿಸಬೇಕೆಂದು ಕಿರಿಯರಿಗೆ ಆದೇಶ.

### ನನ್ನ ಗೋಪಾಲ(೧೯೩೦)

**ಪಾತ್ರಗಳು** - ತಾಯಿ (ಬಡವಳು), ಮಗ ಗೋಪಾಲ, ಬನದ ಗೋಪಾಲ (ದೇವರು), ಗುರುಗಳು.

ಇದೊಂದು ಪುಟ್ಟ ನಾಟಕ. . ಈ ನಾಟಕದ ನಾಯಕ ಗೋಪಾಲ. ಅವನ ತಾಯಿ ಬಡವಳು ಮತ್ತು ವಿಧವೆ. ಒಂದು ಸಣ್ಣ ಗುಡಿಸಲಿನಲ್ಲಿ ಅವರ ವಾಸ. ಗುಡಿಸಲಿನ ಜಗಲಿಯ ಮೂಲೆಯಲ್ಲೊಂದು ದೇವರ ಗೂಡು. ಅದರಲ್ಲಿ ಗೋಪಾಲನ ಚಿಕ್ಕ ವಿಗ್ರಹ. ಗೋಪಾಲನ ತಾಯಿ ಚರಕದಲ್ಲಿ ನೂಲುವ ದೃಶ್ಯ. ಗೋಪಾಲನ ತಾಯಿ ಬೆಳಗ್ಗೆ ಆ ಗೋಪಾಲನ ವಿಗ್ರಹಕ್ಕೆ ಕೈಮುಗಿದು ನನ್ನ ಮಗನನ್ನು ಸಲಹುವ ಭಾರ ನಿನ್ನದು ಎಂದು ಬೇಡಿಕೊಳ್ಳುವಳು. ಅವಳ ಆಸ್ತಿ ಅವಳ ಮಗ, ಆ ಚರಕ, ಮತ್ತು ಕೃಷ್ಣನ ವಿಗ್ರಹ. ಅವಳಲ್ಲಿರುವ ಅಚಲ ಭಕ್ತಿಯೂ ಅವಳ ಆಸ್ತಿಯೇ. ಆಕೆ ಆ ಕೃಷ್ಣನನ್ನು ನನ್ನ ಮುದ್ದಿನ ಕಂದಾ ಎಂದು ಸಂಭೋದಿಸುತ್ತಾಳೆ. "ಮಗನೇ ಕಾಡಿನಲ್ಲಿ ನಿನಗೊಬ್ಬ ಅಣ್ಣನಿದ್ದಾನೆ. ಭಯವಾದರೆ ಅವನನ್ನು ಕರೆ. ಅವನು ನಿನಗೆ ಸಹಾಯ ಮಾಡುತ್ತಾನೆ" ಎಂದಿರುತ್ತಾಳೆ. ಮಗ ಗೋಪಾಲನೂ ತನ್ನ ತಾಯಿಯ ಮಾತನ್ನು ನಂಬಿ ಆಗಾಗ ವನದ ಗೋಪಾಲನನ್ನು ಕರೆ–ಯುತ್ತಿರುತ್ತಾನೆ.ಕರೆದಾಗಲೆಲ್ಲ ಪರಮಾತ್ಮನು ಈ ಹುಡುಗನ ನಿರ್ವಾಜ್ಯ ಪ್ರೀತಿಗೆ ಮನಸೋತು, ಬಂದು , ಕೂಡಿ, ಆಡಿ ಹುಡುಗನನ್ನು ಸಂತೈಸುತ್ತಿರುತ್ತಾನೆ. ಬನದ ಗೋಪಾಲ ಕಾಣಸಿಗುವುದು ಈ ಹುಡುಗನಿಗೆ ಮಾತ್ರ. ಯಾವ ತಪಸ್ಸಿಗೂ ಕಡಿಮೆಯಲ್ಲದ ಸಂತೃಪ್ತ ಪ್ರೀತಿಯುಳ್ಳ ತಾಯಿಯು "ನನಗೆ ನೀನೆ ಎಲ್ಲಾ ಮಗನೆ" ಎನ್ನುತ್ತಾ ಬೇರಾರನ್ನೂ ನೋಡಲೂ ಬಯಸಳು. ಆದರೆ ಬುದ್ಧಿವಂತರಾದ ಗುರುಗಳಿಗೆ ಈ ಹುಡುಗನು ದೇವರ ಪ್ರೀತಿಗೆ ಪಾತ್ರನಾಗಿರುವುದು ಗುರುದಕ್ಷಿಣೆಯ ಪ್ರಕರಣದಿಂದ ಅರಿವಾಗುತ್ತದೆ ಮತ್ತು ಕಾಡಿನ ಗೋಪಾಲ ದೇವರೆಂದು ತಿಳಿಯುತ್ತದೆ. ಆದರೆ ಅವರಿಗೂ ಕಾಣನು. ಗುರುಗಳಿಗೆ. ನಾಟಕ ಹೃದಯ ಮುಟ್ಟುವಂತಿದೆ. ನಾಡಿನ ಗೋಪಾಲ ಬನದ ಗೋಪಾಲನನ್ನು ಶಾಲೆಗೆ ಬಾ ಎಂದು ಕರೆಯುವ ಸನ್ನಿವೇಶವೂ ಬನದ ಗೋಪಾಲ ನಾ ಬಾರೆನೆಂಬುವ ವಿಚಾರವೂ ಮನಮುಟ್ಟುವಂತಿದೆ. ಭಕ್ತರಿಗೆ ಭಕ್ತಿಯನ್ನು ಸಹೃದಯರಿಗೆ ಪ್ರೀತಿಯ ಮಹಾಪೂರವನ್ನು ಹರಿಸುವ ನಾಟಕ ಆಬಾಲ ವೃದ್ಧರಾದಿಯಾಗಿ ಎಲ್ಲರೂ ಮೆಚ್ಚುವಂತಿದೆ. ಸರಳ ಶೈಲಿಯ ಈ ನಾಟಕದಲ್ಲಿ ಭಕ್ತಿಯೂ ಪ್ರೀತಿಯೂ ನಂಬಿಕೆಯೂ ಮೇಳೈಸಿವೆ.

'ನನ್ನ ಗೋಪಾಲ ' ನಾಟಕವನ್ನು ಕುರಿತು ಖ್ಯಾತ ವಿದ್ವಾಂಸರಾದ ಎ ಆರ್ ಕೃಷ್ಣ ಶಾಸ್ತ್ರಿಗಳು ಕುವೆಂಪುರವರಿಗೆ ಹೀಗೆ ಬರೆಯುತ್ತಾರೆ. "ನಿಮ್ಮ 'ನನ್ನ ಗೋಪಾಲ' ಈ ದಿನ ಬೆಳಿಗ್ಗೆ ನನಗೆ ತಲುಪಿತು. ಒಡನೆಯೇ ಓದಿ ಮುಗಿಸಿಬಿಟ್ಟೆ. ಇದು ಭಗವದ್ಗೀತೆ ಮತ್ತು ಭಾಗವತ ಎರಡರ ಸಾರಸರ್ವಸ್ವವನ್ನೂ ತನ್ನಲ್ಲಿ ಮೈಗೂಡಿಸಿಕೊಂಡಿರುವ ಒಂದು ಪುಟ್ಟ ಅನರ್ಘ್ಯ ರತ್ನ. ಕಣ್ಣೀರು ತುಂಬಿ ಅದನ್ನು ಓದಿದ್ದೇನೆ . ಮಡಿಮಾಡಿದ ಹತ್ತಿಯ ಬಟ್ಟೆಯಂತಹ ಅಂತರ್ನೈರ್ಮಲ್ಯವನ್ನು ಅನುಭವಿಸುತ್ತಿದೆ ನನ್ನ ಚೇತನ; ಸಾಧಾರಣವಾಗಿ ಜನ ನನ್ನನ್ನು ಕಲ್ಲು ಮನಸ್ಸಿನ ಕಟು ವ್ಯಕ್ತಿಯೆಂದು ಭಾವಿಸುತ್ತಾರೆ; ಆದರೆ ನಂಬುತ್ತೀರೋ ಇಲ್ಲವೋ , ಅದನ್ನು ಓದಿದ ಮೇಲೆ ನನ್ನ ಹೃದಯ ಒಂದು ಊರ್ಧ್ವಮುಖವಾದ ಸ್ವರ್ಗೀಯ ರಸಾನಂತ ಸ್ರೋತದಲ್ಲಿ ಮುಳುಗಿ ತೇಲಿ ಹೋಗುತ್ತಿರುವಂತಿದೆ. ಪರಿಣಾಮವಾಗಿ ಈವೊತ್ತು ಏನೊಂದೂ ನಿತ್ಯದ ನೀರಸ ಕರ್ತವ್ಯ ಕರ್ಮವನ್ನು ಮಾಡಲಾರದವನಾಗಿದ್ದೇನೆ. ಆಧ್ಯಾತ್ಮಕ್ಕೆ ಇಷ್ಟೊಂದು ಉಪಯುಕ್ತ ವಾಹಕವಾಗಿ ಸಾಹಿತ್ಯ ತಾನೆಂದೂ ಸೃಷ್ಟಿಯಾಗಿಲ್ಲ. ತಮ್ಮ ಸೇವೆಯ ಬದುಕಿನಲ್ಲಿ ವಾಗ್ದೇವಿಯ ಮತ್ತು ಭಗವಂತನ ಕೃಪೆ ನಿತ್ಯಸಂಗಿಯಾಗಿ ನಿಮ್ಮನ್ನು ನಡೆಸಲಿ ಎಂದು ಪ್ರಾರ್ಥಿಸುತ್ತೇನೆ " (೧೩ ಮಾರ್ಚ್ ೧೯೩೦ ಬರೆದ ಪತ್ರ )

### ಯಮನ ಸೋಲು (೧೯೨೮)

**ಪಾತ್ರಗಳು:** ಸಾವಿತ್ರಿ, ಯಮ,ಸತ್ಯವಾನ, ಅಶ್ವಪತಿ ಮಹಾರಾಜ, ರಾಜರ್ಷಿ ದ್ಯುಮತ್ಸೇನ, ಯಮದೂತರು, ಯಕ್ಷರು

ಯಮನ ಸೋಲು (೧೯೨೮) ಹಾಗೂ ವಾಲ್ಮೀಕಿಯ ಭಾಗ್ಯ (೧೯೩೧),ಈ ಎರಡೂ ನಾಟಕಗಳಲ್ಲಿ ಸ್ತ್ರೀ ಪಾತ್ರವು ಪ್ರಮುಖ ಪಾತ್ರವಾಗಿದೆ. ಸಾವಿತ್ರಿ ಮತ್ತು ಸೀತೆ ಇಬ್ಬರೂ ಭಾರತೀಯರ ಬದುಕಿನಲ್ಲಿ ಬಹಳ ಮಹತ್ವ ಪಡೆ–ದಂತಹವರು. ಪಾತಿವ್ರತ್ಯಕ್ಕೆ ಹೆಸರಾದವರು. ಸೀತೆ ರಾಮಾಯಣದ ಮಹತ್ವಪೂರ್ಣ ಪಾತ್ರ, ಕಥಾ ನಾಯಕಿ. ಸಾವಿತ್ರಿ ಮಹಾಭಾರತದಲ್ಲಿ ಒಂದು ಉಪಕಥೆ. ಈ ಕಥೆಯಲ್ಲಿ ಸಾವಿತ್ರಿಯೇ ಕಥಾನಾಯಕಿ. ಸದ್ಗುಣ ಸಂಪನ್ನೆ. ವಿದ್ಯಾ ವಿನಯ ಸಂಪನ್ನೆ, ಚತುರೆ. ತನ್ನ ಪುರುಷನನ್ನು ತಾನೇ ಆಯ್ಕೆ ಮಾಡಿ–ಕೊಂಡ ಧೀರೆ. ಸಾವಿತ್ರಿ ಅಶ್ವಪತಿ ಮಹಾರಾಜನ ಮಗಳು. ರಾಜರ್ಷಿ ದ್ಯುಮತ್ಸೇನನ ಪುತ್ರ ಹೃದಯವಂತ ಸತ್ಯವಾನ ಸುಂದರ, ಸದ್ಗುಣಶೀಲ. ಸಾವಿತ್ರಿ ಅವನ ಸೌಂದರ್ಯಕ್ಕೆ ಮಾರು ಹೋಗಲಿಲ್ಲ. ಸತ್ಯವಾನನ ಅಂತರ್ಗತ ಶೀಲ ಮತ್ತು ಶುಚಿತ್ವಕ್ಕೆ ಮಾರುಹೋದಳು. ಆದರೆ ನಾರದ ಮಹರ್ಷಿಗಳಿಂದ ಸತ್ಯವಾನನು ಅಲ್ಪಾಯು ಎಂಬುದು ತಿಳಿಯುತ್ತದೆ. ಅಶ್ವಪತಿ ಮಹಾರಾಜ ಚಿಂತಾಕ್ರಾಂತನಾಗುತ್ತಾನೆ. ಇದನ್ನರಿತರೂ ಸಾವಿತ್ರಿ ಕುಗ್ಗಲಿಲ್ಲ, ಅಂಜಲಿಲ್ಲ, ಅಳುಕಲಿಲ್ಲ, ಸತ್ಯವಾನನನ್ನೇ ಪತಿಯೆಂದು ಸ್ವೀಕರಿಸಿದಳು, ಮನಸಾ ವರಿಸಿದಳು. ಇದು ಎಲ್ಲರಿಗೂ ಆಘಾತಕಾರಿ ವಿಷಯ! ಸತ್ಯವಾನ ಅಲ್ಪಾಯುವೆಂದು ತಿಳಿದೂ ರಾಜಪುತ್ರಿ ಸಾವಿತ್ರಿ ಅದೆಂತು ಧೃಡಚಿತ್ತದಿಂದಿ

ರ್ದಳೆಂಬುದು ಅನೂಹ್ಯವಾಯಿತು. ಅವಳಿಚ್ಛೆಯಂತೆ ಮದುವೆಯಾಯ್ತು. ರಾಜಪುತ್ರಿ ಪತಿಯೊಡನೆ ಕಾನನದ ಪರ್ಣಕುಟೀರವೆಂಬ ಮನೆಗೈತಂದಳು. ದ್ಯುಮತ್ಸೇನ ದಂಪತಿಗಳೂ ಸತ್ಯವಾನನೂ ಸಗ್ಗದ ಸುಖವನನುಭವಿಸಿದರು.ಮುಂದಿನ ಭಯಾನಕ ಸತ್ಯದರಿವಿರುವ ಸಾವಿತ್ರಿಗೆ ಮುತ್ತಗದ ಹೂವು ಮಸಣದ ಕಂಗೊಳ್ಳಿಯಂತೆ ಕಾಣುತ್ತಿದ್ದವು. ಸತ್ಯವಾನನಿಗಾದರೋ ಅವು ಪ್ರಕೃತಿದೇವಿಯ ಬರುವಿಗಾಗಿ ವನದೇವಿ ಹಿಡಿದ ಪಂಜುಗಳಂತೆ ಕಾಣುತ್ತಿದ್ದವು! ಎಂಥಹ ವಿಪರ್ಯಾಸ, ಒಂದೇ ಬಗೆಯ ಹೂ ! ದೃಷ್ಟಿಕೋನ ಎರಡು ಬಗೆ ! ಆಯಸ್ಸು ಮುಗಿದಾಗ ಕಾಲನವ ಬಾರದಿರ್ಪನೇ ಕರೆದೊಯ್ಯಲು! ಬಂದಾನಯ್ಯೋ ಬಂದನ್ !

ಆಗ ಯಮನ ಆಗಮನ .... ಸತ್ಯವಾನನ ಜೀವಾತ್ಮವನೊಯ್ಯಲು ಸಾವಿತ್ರಿ ಅವಕಾಶ ನೀಡಳು. ಇವರೀರ್ವರ ವಾದ ಪ್ರತಿವಾದಗಳೇ ನಾಟಕದ ಜೀವಾಳ. ನಾಟಕದ ಬಿಗಿಯಾದ ಬಂಧ. ಇಲ್ಲಿ ಧರ್ಮ ಜಿಜ್ಞಾಸೆ ನಡೆಯುತ್ತದೆ. ಹೆಣ್ಣು ಅಬಲೆಯಲ್ಲ ಸಬಲೆ ಎಂಬುದು ಇಲ್ಲಿ ನಿರ್ಧಾರಿತವಾಗುತ್ತದೆ. ಹೆಣ್ಣಿಗೆ ಕಷ್ಟ ಬಂದಾಗ ಒತ್ತಾಸೆಯಾಗಿ ನಿಲ್ಲುವುದು ಗಂಡು. ಅದು ಲೋಕಾರೂಢಿ. ಇಲ್ಲಿ ಪತಿಯನ್ನು ಕಾಲನ ಕೈಯಿಂದ ಬಿಡಿಸಿಕೊಳ್ಳುವ ಧೈರ್ಯ, ಧರ್ಮವನ್ನೇ ಗೆಲ್ಲುವ ಪರಿ, ನಭೂತೋ ನಭವಿಷ್ಯತಿ ಎಂಬಂತಿದೆ. ಯಮಧರ್ಮ ತತ್ವಜ್ಞಾನದ ಪ್ರತೀಕವಾಗಿದ್ದಾನೆ. ಜನನದೊಂದಿಗೇ ಮರಣವೂ ನಿಶ್ಚಿತವಾಗಿರುತ್ತದೆ ಎಂಬುದನ್ನು ಬಹುಪರಿಯಾಗಿ ನಿವೇದಿಸುತ್ತಾನೆ. ಆದರೆ ಸಾವಿತ್ರಿಯ ಮತವೇ ಗೆಲ್ಲುತ್ತದೆ. ಧರ್ಮದ ಮುಂದೆ ನ್ಯಾಯದೇವತೆಯ ಮುಂದೆ ಪ್ರೀತಿ ಗೆಲ್ಲುತ್ತದೆ. ಈ ಸಂಭಾಷಣೆ ತತ್ವ ಮತ್ತು ಸಾಹಿತ್ಯಗಳು ಪರಸ್ಪರ ವಾಗ್ಯುದ್ಧಕ್ಕೆ ನಿಂತಂತೆ ಭಾಸವಾಗುತ್ತದೆ. ಯಮ ತತ್ವದ ಪ್ರತಿನಿದಿಯಾದರೆ ಸಾವಿತ್ರಿ ಸಾಹಿತ್ಯದ ಅರ್ಥಪೂರ್ಣ ಪ್ರತೀಕವಾಗಿಬಿಡುತ್ತಾಳೆ. ಇಲ್ಲಿ ನಾಟಕಕ್ಕೆ ಸಂಬಂಧಿಸಿದ ಸಂಭಾಷಣೆಯ ತುಣುಕಾದರೂ ಇಲ್ಲದಿದ್ದರೆ ಓದುಗರಿಗೆ ನೀರಸವಾದೀತು.

***ಯಮ :*** ಸರ್ವವೂ ವಿಶ್ವ, ಧರ್ಮದ ಋತದ ಅಂಗಾಂಗಗಳು, ತಾಯೆ. ಧರ್ಮಬದ್ಧವಾಗಿಹುದೀ ಮಹಾವಿಶ್ವ. ಧರ್ಮಾಧಿಕಾರಿಯಾದ ನಾನು ಕೂಡ ತರಗೆಲೆಯೆ ಋತ ನಿಯಮದೆದುರು! ತಾಯೆ ಮೃತ್ಯುವನು ಜಯಿಸಿದವರುಂಟೆ? ಶ್ರೀ ರಾಮನಳಿಯನೇ? ಶ್ರೀ ಕೃಷ್ಣನಳಿಯನೇ ? ಋಷಿ ವ್ಯಾಸ ವಾಲ್ಮೀಕಿ ...... .... ಹುಟ್ಟಿದವರೆಲ್ಲರಿಗೂ ಮರಣ ಉಂಟೇ ಉಂಟು. ಜನನ ಮರಣವನ್ನೆಳೆದುಕೊಂಡೇ ಬರುವುದೆಲೆ ತಾಯಿ, ಸಾವಿತ್ರಿ ನಿನ್ನ ಬಳಿ ಬರಲಾರೆ, ದೂರ ಸರಿ, ದೇವಿ ವಿನಯದಿಂದೊರೆಯುವೆನು, ಬೇಡುವೆನು!

***ಸಾವಿತ್ರಿ:***

ಯಮದೇವ, ನೀನಂತು ಧರ್ಮವಂ ಮೀರಲಾರೆಯಿದು ದಿಟ!
ಪತಿಯ ಕೂಡೆನ್ನನೂ ಕೊಂಡೊಯ್ಯಲಾರೆಯಾ?
ಪತಿಯಳಿದ ಮೇಲೆ ಸತಿಗೆ ಜೀವವೇ ಸಾವು!
ಹರ್ಷದಿಂದೈತರುವೆ ಪತಿಯೊಡನೆ ಯಮದೇವ,
ಅದೊಂದು ವರವನು ನೀಡು!

**ಯಮ :** ಇಲ್ಲ ಆಗುವುದಿಲ್ಲ!
ಕಡೆಯ ಕಾಲವು ಬರದ ನರನ ಬಳಿ ನಾ ಸುಳಿಯೇ,
ಚರ್ಮದಿನ ಬಂದೊದಗದೊಂದು ಕೀಟವ ನಾನು ಕೊಂಡೊಯ್ಯಲಾರೆ

**ಸಾವಿತ್ರಿ :** ಹೇ ಧರ್ಮ ನಿನ್ನ ತರ್ಕಕೆ ಸೋತೆ
ತರ್ಕವಾದ ವಿವಾದಗಳಿಗೆಲ್ಲ ಮೀರಿರುವ ಧರ್ಮವೊಂದಿರಬೇಕು,
ಯಮರಾಯ – ನಿಯಮವೊಂದಿರಬೇಕು!

ಇಲ್ಲಿ ಕುವೆಂಪು ಅವರಿಗೆ ಪಾಶ್ಚಾತ್ಯ ಹಾಗೂ ಪೌರ್ವಾತ್ಯ ತತ್ವ ಶಾಸ್ತ್ರಗಳ ಆಳವಾದ ಪರಿಚಯವಿತ್ತು. ಈ ನಾಟಕದಲ್ಲಿ ಕುವೆಂಪುರವರು ತತ್ವಜ್ಞಾನ ಮತ್ತು ಸಾಹಿತ್ಯಗಳನ್ನು ಒರೆಗೆ ಹಚ್ಚುತ್ತಾರೆ. ಯಮ ತತ್ವ ಜ್ಞಾನದ ಪ್ರತೀಕವಾದರೆ ಸಾವಿತ್ರಿ ಪ್ರೇಮಾನುರಾಗದ ಸಾಹಿತ್ಯದ ಪ್ರತಿನಿದಿಯಾಗುತ್ತಾಳೆ.

**ಸಾವಿತ್ರಿ**

ಪ್ರೇಮಾನುರಾಗವು ಧರ್ಮವನು ಮೀರಿರುವದೆಂಬುದನು ಸಾಧಿಸುವೆ,
ಎದೆಯೊಲವು ಋತು ನಿಯಮಕಾತೀತವೆಂಬುದನು ತೋರಿಸುವೆ; ಸಾಧಿಸುವೆ
ಸರ್ವಧರ್ಮವ ಮೀರಿದೊಂದು ಧರ್ಮವುಂಟು
ಎಂಬುದನು ಜಗಕಿಂದು ತೋರಿಸುವೆ....

ಸಾವಿತ್ರಿಯಿಂದ ಇದು ಸಾಧ್ಯವಾಗುತ್ತದೆ. ಅವಳು ಜಾಣ್ಮೆಯಿಂದ ಯಮನನ್ನು ಸೋಲಿಸುತ್ತಾಳೆ. ಪ್ರೇಮ ನಿಷ್ಠೆಯ ಮುಂದೆ ಧರ್ಮ ತಲೆಬಾಗುತ್ತದೆ.

**ಯಮಧರ್ಮ** ಹೀಗೆ ಹೇಳುತ್ತಾನೆ.

ಮೃತ್ಯುವನು ಎದೆಯೊಲವು ಗೆದ್ದಿತೆಲೆ ತಾಯೇ । ನಿನ್ನಿನಿಯನನ್ನಿಗೋ ಕೊಟ್ಟಿರುವೆನು.....
ನಿನ್ನ ಪ್ರೇಮದ ಮುಂದೆ ನನ್ನ ಶಕ್ತಿಯು ಜಳ್ಳು
ಹೋಗಿಬರುವೆನು ತಾಯೆ ಸುಖಿಯಾಗಿ ಬಾಳು
ಯಮನ ಜಯಿಸಿದ ಕಥೆಯ ಜಗಕೆಲ್ಲ ಹೇಳು.

ಯಕ್ಷ - ಯಮದೂತರ ಮಾತು ಮತ್ತೆ ಮುಂದುವರೆದು ನಾಟಕ ದೃಶ್ಯದ ಉಪಸಂಹಾರವಾಗುತ್ತದೆ. ಪ್ರೇಮಮೂರುತಿಯಾದ ಸಾವಿತ್ರಿದೇವಿಗೆ ಯಮನು ಸೋತುದಚ್ಚರಿಯಲ್ಲ. ಸಾವಿತ್ರಿಯ ಪರಿಶುದ್ಧ ಪ್ರೀತಿಗೆ 'ಯಮನ ಸೋಲು ' ನಾಟಕ ಒಂದು ಕೈಗನ್ನಡಿಯಾಯ್ತು.

### ವಾಲ್ಮೀಕಿಯ ಭಾಗ್ಯ (೧೯೩೧)

ಈ ನಾಟಕದ ಬಗ್ಗೆ ಏನು ಬರೆಯಲಾದೀತು ? ಇದು ವಾಲ್ಮೀಕಿಯ ಭಾಗ್ಯವೋ? ಸೌಮಿತ್ರಿಯ ದೌರ್ಭಾಗ್ಯವೋ ಅಸಹಾಯಕತೆಯ, ಕಷ್ಟಗಳ

ಸರಮಾಲೆಗಳ ಪರಮಾವಧಿಯೋ? ನೈಜ ಕಥಾನಕವು ಕಣ್ಮುಂದೆ ಸುಳಿಯುವಾಗ ಇದನ್ನು ನಾಟಕವೆಂದು ಪರಿಗ್ರಹಿಸುವುದೆ ದುಸ್ತರವಾಗಿದೆ. ರಾಮಾಯಣದ ಕಾಲದಿಂದಲೂ ನಮ್ಮಲ್ಲಿ ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆ ಇದೆ ಎಂಬುದು ನಿರ್ವಿವಾದ. ಸಾವಿತ್ರಿ ಮತ್ತು ಸೀತೆ–ಯರಲ್ಲಿ ಎಂತಹ ಸಾಮ್ಯತೆ ವೈರುಧ್ಯತೆ ಗಳಿವೆ ಎಂಬುದನ್ನು ಓದುಗ ವಿಮರ್ಶಕರು ತಮ್ಮಲ್ಲೇ ತಾವೇ ಒರೆಹಚ್ಚಿ ನೋಡಿಕೊಳ್ಳುವುದು ಸೂಕ್ತ. ಇಬ್ಬರೂ ಮಹಾಪತಿವ್ರತೆಯರು. ಸತ್ಯ, ಧರ್ಮ, ನೀತಿ ರೀತಿಯ ನೆಲೆಗಟ್ಟಿನವರು. ಸಾವಿತ್ರಿಯಾದರೋ ಗಂಡನಿಗಾಗಿ ಯಮನನ್ನೇ ಎದುರಿಸಿ ಜಯಿಸಿದಳು. ಶ್ರೀ ರಾಮನಿಂದ ಪರಿತ್ಯಕ್ತಳಾದ ಸೀತೆ ಬಸವಳಿದು ಭೂಮಾತೆಯಲ್ಲೊರಗಿರುವಾಗ ವಾಲ್ಮೀಕಿ ಮಹರ್ಷಿಗಳು ಅಲ್ಲಿಗೆ ಬರುತ್ತಾರೆ. ಅವರ ದಿವ್ಯ ದೃಷ್ಟಿಗೆ ಸೀತೆಯ ಪೂರ್ವಾಪರವೆಲ್ಲವೂ ತಿಳಿಯುತ್ತದೆ. ಮಾತೆ ಸೀತೆಯನ್ನು ಸಂತೈಸಿ ತಮ್ಮ ಆಶ್ರಮಕ್ಕೆ ಕರೆದೊಯ್ಯುತ್ತಾರೆ. ಸೀತೆ ದೊರೆತುದರಿಂದ ಮುಂದೆ ರಾಮಾಯಣದ ರಚನೆಯಾಯ್ತು. ಇದೇ ವಾಲ್ಮೀಕಿಯ ಭಾಗ್ಯ. ಸೀತೆಯ ಮಕ್ಕಳಿಗೆ ಲವಕುಶರೆಂದು ನಾಮಕರಣ ಮಾಡಿ ಮುಂದೆ ಆ ಮಕ್ಕಳಿಂದಲೇ ರಾಮಾಯಣವನ್ನು ಪ್ರಚುರಪಡಿಸಿದರು. ಇದೆ ವಾಲ್ಮೀಕಿಯ ಭಾಗ್ಯ. ತನ್ಮೂಲಕ ರಾಮಾಯಣವೂ ವಾಲ್ಮೀಕಿಯೂ ಅಜರಾಮರ!

ಇಲ್ಲಿ ಲಕ್ಷ್ಮಣನ ಪಾತ್ರ ಬಹಳ ದುಸ್ತರ. ಅತೀ ಕಷ್ಟಕರ. ಮಾತೆ (ಅತ್ತಿಗೆ) ಸೀತೆ ಸಾಧ್ವಿ, ಸಚ್ಚಾರಿತ್ರಳು. ಅಂಥವಳನ್ನು ಯಾರದೋ ಪಿಸುಣ್ ಗೆ ಕಿವಿಗೊಟ್ಟ ಶ್ರೀ ರಾಮಚಂದ್ರನ ಕಟ್ಟಾಣತಿಯಂತೆ ತುಂಬು ಗರ್ಭಿಣಿಯಾದ ಆ ದೇವತಾ ಸ್ವರೂಪಿಯನ್ನು ಕಾನನದಲ್ಲಿ ಬಿಟ್ಟು ಹೋಗುವ ಹೃದಯ ವಿದ್ರಾವಕ ಸನ್ನಿವೇಶವನ್ನು ಚಿತ್ರಿಸಲು ಈ ದೃಶ್ಯ ಪ್ರಯತ್ನಿಸಿದೆ. ಲಕ್ಷ್ಮೀಶನು ಪದ್ಯರೂಪದಲ್ಲಿ ಮುದ್ದಣನು ಗದ್ಯರೂಪದಲ್ಲಿ ಈ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಹೃದಯಕ್ಕೆ ಮುಟ್ಟುವಂತೆ ಚಿತ್ರಿಸಿದ್ದಾರೆ. ಈ ಕವಿಗಳ ಪ್ರೌಢಿಮೆ ಅನುಕರಣೀಯ ಎಂಬುದನ್ನು ಕುವೆಂಪುರವರು ಸ್ವೀಕರಿಸಿದಂತಿದೆ. ಇಲ್ಲಿ ಸೀತೆ ಮತ್ತು ಸೌಮಿತ್ರಿ ಇವರ ಇವರ ಪಾತ್ರ ನಿರೂಪಣೆಯೇ ಶಕ್ತಿಯುತ ಭಾಗ. ಎಲ್ಲ ತಿಳಿದ ಲಕ್ಷ್ಮಣನೊಂದು ಕಡೆ. ಏನೂ ಅರಿಯದ ಮುಗ್ಧೆ ಜಾನಕಿಯೊಂದು ಕಡೆ. ತನ್ನೊಡನೆ ಲಗುಬಗೆಯಿಂದ ನಡೆದುಬಾರದ ಲಕ್ಷ್ಮಣನನ್ನು ಸೀತೆ ಹೀಗೆ ಛೇಡಿಸುತ್ತಾಳೆ.

ಓಹೋ ! ಈಗಳರಿತೆಂ । ಅರಮನೆಯ ವಾಸಂ ,
ಮೇಣ್ ಊರ್ಮಿಳೆಯ ಲಲಿತ ಸಹವಾಸಂ
ನಿನ್ನನಿಂತು ಗೈದಿರ್ಪುದೆ ಸಾಜಂ ।

ಲಕ್ಷ್ಮಣನ ಮನಸ್ಸಿನ ಸಂಕಟ ಅವನ ಕಾಲೆಳತದಲ್ಲಿ ಕಾಣಿಸುತ್ತಿದೆ. ಸೀತೆ ಆತನ ನಿಧಾನ ಗತಿಯನ್ನು ಅರ್ಥೈಸುವುದೇ ಬೇರೆ. ಹೇಳಲೇಬೇಕಾದ ವಿಷಯವನ್ನು ಹೇಳಲಾಗದೆ ಹೇಳದಿರಲಾಗದೇ ತೊಳಲಾಡುವ ಸೌಮಿತ್ರಿಯ ಸ್ಥಿತಿ ಬಹಳ ಕಷ್ಟಕರ. ಅಂತೂ ಯಾವುದೋ ಮಾತಿನ ಸಂದರ್ಭದಲ್ಲಿ ಹೇಳುತ್ತಾನೆ. 'ತಾಯೆ ನಿಮ್ಮೊಡನೆ ನಾ ಮರಳಲಾರೆ ' ಎಂದು. ಆ ಮಾತಿನ ಆಂತರ್ಯವನ್ನರಿಯದ ಸೀತೆ ಕೋಪಿಸಿಕೊಂಡು ಹಾಗೆಯೇ ಆಗಲಿ ನನ್ನಿಲ್ಲಿಯೇ ಬಿಟ್ಟು ನೀನೊರ್ವನೆ ಪೋಗು ಎನ್ನುತ್ತಾಳೆ. ಆ ಲಕ್ಷ್ಮಣ 'ಹಾ ತಾಯೆ ಶ್ರೀರಾಮನಂತಾಡದಿರಿ ' ಎನ್ನುತ್ತಾನೆ. ಆಗ ಸೀತೆ - 'ಏನಾಡಿದಂ ಶ್ರೀ ರಾಮಚಂದ್ರಂ ? ಪೇಳಯ್ ! ಎನ್ನೊಡನೇತರ್ಕಯ್ ಮುಚ್ಚುಮರೆ ' ಎಂದು ಒತ್ತಾಯಿಸುತ್ತಾಳೆ. ಆಗ ಆ ನಿಷ್ಠುರ ಸತ್ಯ ಹೊರಬೀಳುತ್ತದೆ. ಈ ಚಿತ್ರವನ್ನು ಕುವೆಂಪು ಅವರು ಚಿತ್ರಿಸಿರುವ ರೀತಿ ಅವರ ಪ್ರತಿಭೆಯ ಸ್ವರೂಪವನ್ನು ಓದುಗರಿಗೆ , ನಾಟಕ ನೋಡುವವರಿಗೆ ಪರಿಚಯಿಸುತ್ತದೆ. ಸೀತಾ ಪರಿತ್ಯಾಗವನ್ನು ಮಹಾನ್ ಕವಿಗಳು ಹಿಂದೆ ಅವರವರ ಭಾವಕ್ಕನುಸಾರವಾಗಿ ವರ್ಣಿಸಿದ್ದಾರೆ. ರಾಮನನ್ನು ಸಮರ್ಥಿಸಲು ಬಹಳ ಕಾರಣಗಳನ್ನು ನೀಡಿರುತ್ತಾರೆ. ಲಕ್ಷ್ಮೀಶನ ಪ್ರಕಾರ 'ಸೀತೆಯು ಕರುಣಾಳು ರಾಘವನಲ್ಲಿ ತಪ್ಪಿಲ್ಲ' ಹೆಣ್ಣಾಗಿ ಹುಟ್ಟಿದ ತನ್ನದೇ ತಪ್ಪು ಎನ್ನುವಳು. ಇದು ಮತ್ತಷ್ಟು ದುಃಖದ ಸಂಗತಿ.

ನಟ್ಟಡವಿಯಲ್ಲಿ ದಿಕ್ಕು ಕಾಣದೆ ಕಂಗಾಲಾಗಿರುವ ಜಾನಕಿಯನ್ನು ಕಂಡ ವಾಲ್ಮೀಕಿಯವರು ಅವಳನ್ನು ಸಂತೈಸುತ್ತಾ - ತಾಯಿ ಮೇಲೇಳು , ನಿನಗೆಲ್ಲಂ ಒಳಿತಹುದು. ನೀನೆನ್ನ ಮಹಾಕಾವ್ಯದ ಸವಿಗಣ್ಣತ್ತಿ . ಕಥಾನಾಯಕಿಯತ್ತಿ. ವಾಲ್ಮೀಕಿಯ ಭಾಗ್ಯಮತ್ತಿ. ಎನ್ನುತ್ತಾರೆ. ವಾಲ್ಮೀಕಿಯ ಭಾಗ್ಯವಾಗಿ ಅವರಿಗೆ ಸೀತೆ ದೊರಕುತ್ತಾಳೆ. ಮುಂದೆ ರಾಮಾಯಣದ ರಚನೆಗೆ ಸೀತೆಯೇ ಕಾರಣವಾಗುತ್ತಾಳೆ. ತನ್ನ ಕಥಾ ನಾಯಕಿಯನ್ನು ತಾನೇ ಕಾಪಾಡಿದ್ದು ವಾಲ್ಮೀಕಿಯ ಭಾಗ್ಯವೇ ಸರಿ.

ಕುವೆಂಪುರವರು ರಚಿಸಿದ ನಾಟಕಗಳು ನೈಜ ಜೀವನದ ಪ್ರತಿ–ರೂಪಗಳಂತಿರುತ್ತವೆ."ಮೋಡದ ತಮ್ಮ"ದ ,"ನನ್ನ ಗೋಪಾಲ"ನ ಮುಗ್ಧಬಾಲಕರ ಮುಗ್ಧತೆಗೆ ಮಾರು ಹೋಗದವರಾರು! ಯಮನ ಸೋಲಿನಲ್ಲಿ ಸಾವಿತ್ರಿ ಮತ್ತು ವಾಲ್ಮೀಕಿಯ ಭಾಗ್ಯದ ಸೀತೆಯ ಪಾತ್ರಗಳು ನಮ್ಮ ಸನಾತನ ಸಂಸ್ಕೃತಿಗೆ ಹಿಡಿದ ಕೈಗನ್ನಡಿಯಂತಿದೆ. ಉಳಿದ ನಾಟಕಗಳು ಸಾಹಿತ್ಯ ಲೋಕದಲ್ಲಿ ಹೊಳೆಯುತ್ತಿರುವ ರತ್ನಗಳು. ಇನ್ನುಳಿದ ನಾಟಕಗಳನ್ನು ಮತ್ತೆ ಮೆಲುಕು ಹಾಕೋಣ. ಓದಿ ಚರ್ಚಿಸಿ ಧನ್ಯರಾಗೋಣ.

**ಆಕರ ಗ್ರಂಥಗಳು –**

೧.ಕುವೆಂಪು ಸಮಗ್ರ ನಾಟಕ (ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ) ಕುಪ್ಪಳ್ಳಿ)
೨.ಕುವೆಂಪು ನಾಟಕಗಳ ಅಧ್ಯಯನ – ನರಹಳ್ಳಿ ಬಾಲಸುಬ್ರಮಣ್ಯ



# ಆಫೀಸಿನ ಕಿರಿಕ್!!!

.

*(In the same tone of "ಬೆಳೆಗೆದ್ದು ಯಾರ ಮುಖವ ನಾನು ನೋಡಿದೆ.." from ಕಿರಿಕ್ ಪಾರ್ಟಿ)*

**ಶ್ರೀವತ್ಸ ಕುಲಕರ್ಣಿ**

*ಬೆಳಗೆದ್ದು ಆಫೀಸ್ ಗೆ, ready ಆಗ್ಬೇಕಿದೆ ಏ ಏ ಏ....,*
*ಕಷ್ಟಾನೋ-ಇಷ್ಟಾನೋ ಹೋಗ್ಬೇಕಾಗಿದೆ....*

*ನೆನ್ನೆ ಬರ್ದಿದ್ ಕೋಡು (Code), Self reviewಉ,*
*ಇನ್ನ ಮಾಡ್ ಬೇಕಾಗಿದೆ...*
*ಅಷ್ಟ್ರಲ್ಲಿ PM (Project manager), ಬಂದ್ರೆ ಗರಂ,*
*ಆಗಿ ಕುಂತು, ಬೀಡ್ ತಾನೇ...*

*Ratingsಉ, ಆರ ರ ರ ರೇ.....*
*ಗೋವಿಂದಾ, ಅಲ ಲ ಲ ಲೇ.....*
*Promotionಉ, ಅಯ್ಯೋ ಯ್ಯ ಯ್ಯ ಯ್ಯೋ,*
*ಮೀಸ್ಸು ಮಾಡಿಕೊಳಲಾರೇ.....*

*ಮತ್ತೊಮ್ಮೆ...*

*Ratingsಉ, ಆರ ರ ರ ರೇ.....*
*ಗೋವಿಂದಾ, ಅಲ ಲ ಲ ಲೇ.....*
*Promotionಉ, ಅಯ್ಯೋ ಯ್ಯ ಯ್ಯ ಯ್ಯೋ,*
*ಮೀಸ್ಸು ಮಾಡಿಕೊಳಲಾರೇ.....*

*Projectಅಲ್ಲಿ ಹೊಸ App ಬರೆಯೋ ಖಯಾಲಿ,*
*ಆದ್ರೆ "no funding", ಅನ್ನೋದ್ ಮಾಮೂಲಿ,*
*Quarter ಗೊಂದು, Innovations ಕೇಳುವಾ ವಿಧಾನ,*
*ಇರೊ Excel ನಲ್ಲೆ, automation ಮಾಡೋದೇ ಮಜಾನಾ...*

*ಬಿಡವೊಲ್ಲದೂ ಈ project,*
*ಸೆರೆಸಿಕ್ಕೆವೋ ಈ Clients ಗೇ....*

*Hikeಉ ಸುತ್ತ ಸುಳಿಯೋ, ಆಸೆಗೀಗ ಆಯಸ್ಸ್ ಹೆಚ್ಚಿ ಹೋಗಿದೆ,*
*ಬರೋ Salary ಜೊತೆ ಕಳೆಯೋ ಎಲ್ಲ ಕ್ಷಣವೂ, ಕಲ್ಪನೆಗೂ ಮೀರಿದೆ,*

*Salaryಯು, ಆರ ರ ರ ರೇ.....*
*ಸಾಲ್ತಿಲ್ಲಾ, ಅಲ ಲ ಲ ಲೇ.....*
*ಏನ್ ಮಾಡೋದು, ಅಯ್ಯೋ ಯ್ಯ ಯ್ಯ ಯ್ಯೋ,*
*GC (Green Card) ಗೋಸ್ಕರ ನಾ ಕಾಯಲಾರೇ.....*

*ಬೆಳಗೆದ್ದು ಆಫೀಸ್ ಗೆ, ready ಆಗ್ಬೇಕಿದೆ ಏ ಏ ಏ....,*
*ಕಷ್ಟಾನೋ-ಇಷ್ಟಾನೋ ಹೋಗ್ಬೇಕಾಗಿದೆ...*



# ವಸಂತದ ನೆನಪುಗಳು

**ಜೆ ವಿ ವಿ ಮೂರ್ತಿ**

ಬರೇ ಪ್ರಕೃತಿಯ ಪಳೆಯುಳಿಕೆಗಳು ಈಗ ಬೆಂಗಳೂರು ನಗರಾರಣ್ಯದಲಿ,

ನಾನು ನೆನೆಸಿಕೊಳ್ಳುತ್ತಿರುವುದು ಸಾವಿರದ ಒಂಭೈನೂರರವತ್ತರ ದಶಕಗಳಲ್ಲಿ.

ಕಣ್ಣಾಡಿಸಿದೆಡೆಯಲ್ಲೆಲ್ಲಾ ಸಾಲುಮರಗಳ ಅಡಿ ಹರಡಿಟ್ಟ ಹೂಗಳ ಹಾಸು

ಚೈತ್ರವೈಶಾಖ ಮಾಸದಲ್ಲಿ ಕಾಣುತ್ತಿತ್ತು ಈ ದೃಶ್ಯ ಎಲ್ಲೆಲ್ಲು ಆಸುಪಾಸು

ಪಾರ್ಕು ಬುಲ್ವಾ ಮತ್ತು ಮನೆಗಳ ಕಾಂಪೌಂಡಿನೆಲ್ಲೆಲ್ಲೂ,

ಬಣ್ಣಗಳ ವಿಜೃಂಭಣೆ ವಿವಿಧ ವರ್ಣಗಳ ಪೂರ್ಣ ಹರಹು ಸುತ್ತಲೂ

ಹಳದಿ ತೆಳುಗೆಂಪು ಕೆನ್ನೀಲಿ ರಕ್ತಗೆಂಪು ಬಿಳಿ ಮತ್ತು ಹಸಿರು

ಅಲೌಕಿಕ ಅನುಭವ ಪುನಃಚೇತನ ಕೊಡುವ ನೋಟ ನೀಡುತ್ತಿತ್ತು ಹೊಸ ಉಸಿರು

ಶಾಲೆಗೆ ರಜ ಬರೇ ಆಟಪಾಟ ಗೆಳೆಯರ ಒಡನಾಟ ಅನಿರ್ಬಂಧಿತ

ಅದೆಷ್ಟು ಆಶಿಸುತ್ತಿದ್ದೆವು ಮತ್ತೆ ಮತ್ತೆ ಮರುಕಳಿಸಲು ಈ ವಸಂತ!

# ಬೃಂದಾವನ – ಒಂದು ಕವನ



**ಗುರುಪ್ರಸಾದ್ ದತ್ತಾತ್ರಿ**

ಬೃಂದಾವನ ಬೃಂದಾವನ
ಬೃಂದಾವನ ಚಂದನವನ
ಕನ್ನಡ ಮಕ್ಕಳ ತುಳಸೀ ವನ
ನಿತ್ಯ ಕನ್ನಡ ದೇವಿಯ ಆರಾಧನಾ।

ಅನುದಿನ ಅನುರಣ ಭಾಷೆಯ ಪೋಷಣ
ಕನ್ನಡ ನುಡಿಯೋದ್ಧಾರದ ಕಂಕಣ
ಕನ್ನಡ ಮನಗಳ ಸಮ್ಮಿಲನ
ಇದುವೇ ನಮ್ಮೀ ಬೃಂದಾವನ।

ಕನ್ನಡ ಜಗಕೆ ಹಾರ್ದಿಕ ತೋರಣ
ಪ್ರೀತಿ ಸ್ನೇಹ ಗಳ ಸವಿಸಿಹಿ ಹೂರಣ
ವಿಶ್ವ ಕನ್ನಡಿಗರ ಸಂಸ್ಥಾಪನಾ
ಇದುವೇ ನಮ್ಮೀ ಬೃಂದಾವನ।

(ನಮ್ಮ ಹೊಸ ಸದಸ್ಯರಲ್ಲಿ ಒಬ್ಬರಾದ ಗುರುಪ್ರಸಾದ್ ದತ್ತಾತ್ರಿ ಅವರು ನಮ್ಮ " ಬೃಂದಾವನ" ವನ್ನು ಕುರಿತು ಒಂದು ಪದ್ಯವನ್ನು ಬರೆದು ಅದಕ್ಕೆ ರಾಗವನ್ನು ಪೋಣಿಸಿ, ಇಂಪಾಗಿ ಹಾಡಿದ್ದಾರೆ... ಹಾಡು ಕೇಳಲು, ಈ ಕೊಂಡಿಯನ್ನು ಕ್ಲಿಕ್ ಮಾಡಿ!)